# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಗುರುವಾರ, ಫೆಬ್ರವರಿ 20, 2025

ಸಂಪುಟ : 51 ಸಂಚಿಕೆ : 279 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ಪಾದಯಾತ್ರೆಯಲ್ಲಿ ಅಂತರಂಗದ ದರ್ಶನವಾಗಲಿ

### ಕೊಟ್ಟೂರು ಪಾದಯಾತ್ರಿಗಳಿಗೆ ಬೀಳ್ಕೊಡುಗೆ ಸಮಾರಂಭದಲ್ಲಿ ಬಸವಪ್ರಭು ಶ್ರೀ

ದಾವಣಗೆರೆ, ಫೆ. 19- ತಮ್ಮ ಇಷ್ಟಾರ್ಥ ನೆರವೇರಿಸುವಂತೆ ಬೇಡಿಕೊಂಡು ಚಿಕ್ಕ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ ಸಾವಿರಾರು ಸಂಖ್ಯೆಯಲ್ಲಿ ಕೊಟ್ಟೂರಿಗೆ ಪಾದಯಾತ್ರೆ ತೆರಳುತ್ತಾರೆ. ಆದರೆ ಪಾದಯಾತ್ರೆ ಕೇವಲ ಪ್ರದರ್ಶನವಾಗದೇ ಅಂತರಂಗದ ದರ್ಶನ ಮಾಡಿಸುವಂತಾಗಬೇಕು ಎಂದು ವಿರಕ್ತಮಠದ ಡಾ. ಶ್ರೀ ಬಸವಪ್ರಭು ಸ್ವಾಮೀಜಿ ಬಣ್ಣಿಸಿದರು.

ನಗರದ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಮಹಾಸ್ವಾಮಿ ದೇವಸ್ಥಾನದ ಆವರಣದಲ್ಲಿ ಕೊಟ್ಟೂರು ಶ್ರೀ ಗುರು ಬಸವರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಇಂದು ಸಂಜೆ 46 ನೇ ವರ್ಷದ ಸಮಗ್ರ ಪಾದಯಾತ್ರೆ ಬೀಳ್ಕೊಡುಗೆ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರು ಕೊಟ್ಟಂತಹ ಸಮಾನತೆ, ಕಾಯಕ ಮತ್ತು ದಾಸೋಹ ತತ್ವವನ್ನು 16-17 ನೇ ಶತಮಾನದಲ್ಲಿ ಕೊಟ್ಟೂರೇಶ್ವರರು ಮನೆ ಮನೆಗೆ ತೆರಳಿ ಪ್ರಚಾರ ಮಾಡಿದ ಮಹಾನ್ ಯೋಗಿಗಳು ಎಂದು ಬಣ್ಣಿಸಿದರು.

ಕೊಟ್ಟೂರೇಶ್ವರರನ್ನು ಇಂದಿಗೂ ಪವಾಡ ಪುರುಷರೆಂದೇ ಬಣ್ಣಿಸಲಾಗುತ್ತಿದೆ. ರಥೋತ್ಸವ ಸಂದರ್ಭದಲ್ಲಿ ದಲಿತರ ಮನೆಯಿಂದಲೇ ಗಿಣ್ಣು ಬರುತ್ತೆ. ಜಾತಿ, ಮತ, ಮೇಲು, ಕೀಳೆಂಬ ಭೇದ-ಭಾವವಿಲ್ಲ. ಮಾನವರೆಲ್ಲರೂ ಶ್ರೇಷ್ಠರು ಎಂಬ ಸಮಾನತೆಯ ತತ್ವವನ್ನು ಎತ್ತಿ ಹಿಡಿದಿದ್ದಾರೆ. ಹನ್ನೆರಡನೇ ಶತಮಾನದಲ್ಲಿನ ಅನುಭವ ಮಂಟಪದ ಆದರ್ಶವನ್ನು ಇಂದಿಗೂ ಕೊಟ್ಟೂರಿನಲ್ಲಿ ಕಾಣುತ್ತೇವೆ ಎಂದರು.

ನಂಬಿದ ಭಕ್ತರನ್ನು ಎಂದಿಗೂ ಕೈಬಿಡದೇ ಅವರ ಇಷ್ಟಾರ್ಥಗಳನ್ನು ನೆರವೇರಿಸುವ ಮಹಾನ್ ಪವಾಡ ಪುರುಷ ಕೊಟ್ಟೂರು ಗುರುಬಸವೇಶ್ವರರು ಎಂದು ಹೇಳಿದರು.

ಅಯ್ಯನಹಳ್ಳಿ ರಂಭಾಪುರಿ ಶಾಖಾ ಮಠದ ಶ್ರೀ ಮಹೇಶ್ವರ ಸ್ವಾಮೀಜಿ ಮಾತನಾಡಿ, ಕೊಟ್ಟೂರು ಪಾದಯಾತ್ರಿಗಳಲ್ಲಿ ನಿಜ ಭಕ್ತಿ ಕಡಿಮೆಯಾಗುತ್ತಿದೆ. ಅವರು ಹೋಗುತ್ತಾರೆ, ನಾನು ಹೋಗಬೇಕು ಎಂಬ ಆಡಂಬರದ ಭಕ್ತಿಯೇ ಬಹಳಷ್ಟು ಪಾದಯಾತ್ರಿಗಳಲ್ಲಿ ಕಾಣುತ್ತೇವೆ. ಕೆಲವು ಯುವಜನರ ಪಾಲ್ಗೊಳ್ಳುವಿಕೆ ನೋಡಿದರೆ ನಮ್ಮ ಮನಸ್ಸಿಗೆ ನೋವಾಗುತ್ತದೆ. ಪಾದಯಾತ್ರಿಗಳಿಗಾಗಿ ಜನರು ಮಾಡುವ ಸೇವೆ ಅನನ್ಯವಾದುದು. ಅವರಲ್ಲಿ ನಾವು ನಿಜವಾದ ಭಕ್ತಿಯನ್ನು ಕಾಣುತ್ತಿದ್ದೇವೆ ಎಂದರು.

ಯುವಕರಲ್ಲಿ ಪಾದಯಾತ್ರೆಯ ಅರಿವು ಇರುವುದಿಲ್ಲ. ದಾವಣಗೆರೆಯಿಂದ ಕೊಟ್ಟೂರಿನವರೆಗಿನ ಪಾದಯಾತ್ರೆಯ ಮಾರ್ಗ ಮಧ್ಯೆ ಪಾದಯಾತ್ರಿಗಳಿಗೆ ಮಾಡುವ ಸೇವೆಯ ಪರಿಶ್ರಮ ದೊಡ್ಡದು. ಆ ಸೇವೆಯಲ್ಲಿಯೇ ಸಾಕ್ಷಾತ್ ಕೊಟ್ರಯ್ಯನನ್ನು ಕಾಣುತ್ತಾರೆ ಎಂದು ಹೇಳಿದರು.

ನೀರನ್ನು ಮಿತವಾಗಿ ಬಳಸಬೇಕು. ಪ್ರಸಾದವನ್ನು ವ್ಯರ್ಥ ಮಾಡದೇ, ಎಲ್ಲೆಂದರಲ್ಲಿ ಗುಟುಕಾ ತಿಂದು ಉಗಿಯದೇ, ನೀರಿನ ಬಾಟಲುಗಳನ್ನು ಎಲ್ಲೆಂದರಲ್ಲಿ ಬಿಸಾಕದೇ, ಸದ್ಭಾವದಿಂದ ಪಾದಯಾತ್ರೆಯ ಉದ್ದೇಶವನ್ನು ಈಡೇರುಸುವ ಮೂಲಕ ಭಕ್ತಿ (5ನೇ ಪುಟಕ್ಕೆ)

## ಅನ್ನಭಾಗ್ಯ: ಹಣಕ್ಕೆ ಬದಲು ಅಕ್ಕಿ

**ಕೆಜಿಗೆ 22.50 ರೂ. ನಂತೆ ಅಕ್ಕಿ ವಿತರಣೆಗೆ ಮುಂದಾದ ಕೇಂದ್ರ ಸರ್ಕಾರ**

**ರಾಜ್ಯದಿಂದ ಕೆ.ಜಿ.ಗೆ 34 ರೂ.ನಂತೆ 170 ರೂ. ನೀಡಿದ್ದ ಹಣದ ಬದಲು 5 ಕೆಜಿ ಅಕ್ಕಿ ವಿತರಣೆ: ಸಚಿವ ಮುನಿಯಪ್ಪ**



ಬೆಂಗಳೂರು, ಫೆ. 19- ಅನ್ನಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಹಣಕ್ಕೆ ಬದಲು ಈ ತಿಂಗಳಿನಿಂದಲೇ ಐದು ಕೆ.ಜಿ. ಅಕ್ಕಿ ವಿತರಿಸಲಾಗುವುದು ಎಂದು ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಇಂದಿಲ್ಲಿ ಪ್ರಕಟಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ನೀಡುತ್ತಿದ್ದ ಐದು ಕೆ.ಜಿ. ಅಕ್ಕಿ ಜೊತೆಗೆ ಅನ್ನಭಾಗ್ಯ ಯೋಜಯಡಿ ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ ಐದು ಕೆ.ಜಿ. ಅಕ್ಕಿ ನೀಡಲಾಗುವುದು.

ಕೇಂದ್ರ ಸರ್ಕಾರ ರಾಜ್ಯಕ್ಕೆ ಅಗತ್ಯವಾಗಿದ್ದ ಅಕ್ಕಿ ಪೂರೈಸದ ಕಾರಣ ಈ ಯೋಜನೆಯಡಿ ಅಕ್ಕಿ ಬದಲು ಪ್ರತಿ ಫಲಾನುಭವಿಗೆ ಮಾಸಿಕ 170 ರೂ. ಗಳನ್ನು ನೀಡಲಾಗುತ್ತಿತ್ತು.

ಕಳೆದ ಜನವರಿವರೆಗೂ ಹಣವನ್ನು ಫಲಾನುಭವಿ ಖಾತೆಗೆ ವರ್ಗಾವಣೆ ಮಾಡಲಾಗುವುದು, ಈ ತಿಂಗಳಿಂದ ನಗದು ಬದಲು ಅಕ್ಕಿ ನೀಡಲು ತೀರ್ಮಾನಿಸಲಾಗಿದೆ. ಮಾರ್ಚ್ 10ರೊಳಗಾಗಿ ಫಲಾನುಭವಿಗಳಿಗೆ ಎರಡು ತಿಂಗಳ ಅಕ್ಕಿಯೂ ದೊರೆಯಲಿದೆ, ಎಂದಿನಂತೆ ಪಡಿತರ ಅಂಗಡಿಗಳಲ್ಲಿ ಅಕ್ಕಿ ಪಡೆದುಕೊಳ್ಳಬಹುದಾಗಿದೆ.

ಸರ್ಕಾರದ ಈ ನಿರ್ಧಾರದಿಂದ ರಾಜ್ಯದ ಬೊಕ್ಕಸಕ್ಕೆ ನೂರಾರು ಕೋಟಿ ರೂ. ಉಳಿತಾಯ ಆಗಲಿದೆ, ಕೇಂದ್ರ ಸರ್ಕಾರ ಪ್ರತಿ ಕೆ.ಜಿ.ಗೆ 22.50 ರೂ.ನಂತೆ ಅಕ್ಕಿ ಕೊಡಲು ಮುಂದೆ ಬಂದಿದೆ. ಫಲಾನುಭವಿಗಳಿಗೆ ಇದುವರೆಗೆ ಅಕ್ಕಿ ಬದಲು ಪ್ರತಿ ಕೆ.ಜಿ.ಗೆ 34 ರೂ.ನಂತೆ ಮಾಸಿಕ 170 ರೂ. ನೀಡುತ್ತಿದ್ದೆವು.

ಕೇಂದ್ರ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಪ್ರಲ್ಹಾದ್ ಜೋಷಿ, ರಾಜ್ಯಕ್ಕೆ ಅಗತ್ಯವಿರುವ ಅಕ್ಕಿಯನ್ನು ಕಡಿಮೆ ದರಕ್ಕೆ ನೀಡಲು ತೀರ್ಮಾನಿಸಿರುವುದರಿಂದ, ನಮಗೆ ಪ್ರತಿ ಕೆ.ಜಿ.ಗೆ 11.50 ರೂ. ಉಳಿತಾಯವಾಗಲಿದೆ ಎಂದರು.

ರಾಜ್ಯ ಸರ್ಕಾರ ಅನ್ನಭಾಗ್ಯ ಯೋಜನೆ ಜಾರಿಗೊಳಿಸಿದಾಗ ನಮಗೆ ಅಗತ್ಯವಿರುವ ಅಕ್ಕಿಯನ್ನು ನೀಡಲು ಕೇಂದ್ರ ನಿರಾಕರಿಸಿದ್ದರಿಂದ ಪ್ರತಿ ಫಲಾನುಭವಿಗೆ ಮಾಸಿಕ 170 ರೂ.ಗಳನ್ನು ಅವರ ಬ್ಯಾಂಕ್ ಖಾತೆಗೆ ವರ್ಗವಣೆ ಮಾಡುತ್ತಿದ್ದೆವು.

ಕಳೆದ ನವೆಂಬರ್‌ವರೆಗೆ ಹಣ ಸಂದಾಯವಾಗಿದೆ, ಡಿಸೆಂಬರ್ ಮತ್ತು ಜನವರಿ ತಿಂಗಳ ಹಣ ವರ್ಗಾವಣೆಗೆ ಸಿದ್ಧತೆ ನಡೆದಿದೆ.

ಇನ್ನು ಮುಂದೆ ಹಣದ ಬದಲು ಪ್ರತಿ ಫಲಾನುಭವಿ ಮಾಸಿಕ 10 ಕೆ.ಜಿ. ಅಕ್ಕಿಯನ್ನು ಉಚಿತವಾಗಿ ಪಡೆದುಕೊಳ್ಳಲಿದ್ದು, ಇದರಲ್ಲಿ ಕೇಂದ್ರದ ಐದು ಕೆ.ಜಿ. ಮತ್ತು ರಾಜ್ಯ ಸರ್ಕಾರದ ಐದು ಕೆ.ಜಿ. ಸೇರಿದೆ.

ಕಳೆದ ಅಕ್ಟೋಬರ್‌ನಲ್ಲಿ 1,16,39,179 ಪಡಿತರ ಚೀಟಿಗಳ 4,12,16,838 ಫಲಾನುಭವಿಗಳಿಗೆ 676.79 ಕೋಟಿ ರೂ. ವರ್ಗಾವಣೆ ಮಾಡಲಾಗಿದೆ.

ಜುಲೈ 2023ರಿಂದ ಅಕ್ಟೋಬರ್ 2024ರವರೆಗೆ 10,452 ಕೋಟಿ ರೂ. ವರ್ಗಾವಣೆ ಮಾಡಲಾಗಿದ್ದು, ನವೆಂಬರ್, ಡಿಸೆಂಬರ್ ಮತ್ತು ಜನವರಿ ಹಣ ವರ್ಗಾವಣೆ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು. ಭಾರತ ಸರ್ಕಾರ 2013ರಲ್ಲಿ ಜಾರಿಗೆ ತಂದ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ನು ಮೊಟ್ಟ ಮೊದಲು ಜಾರಿಗೆ ತಂದ ರಾಜ್ಯ ಕರ್ನಾಟಕವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಮೊದಲ ಮತ್ತು ಎರಡನೇ (2ನೇ ಪುಟಕ್ಕೆ)

## ಸಿಎಂ ಸಿದ್ದರಾಮಯ್ಯ, ಪತ್ನಿಗೆ ಕ್ಲೀನ್‌ಚಿಟ್

### ಮುಡಾ ಪ್ರಕರಣ





ಬೆಂಗಳೂರು, ಫೆ. 19 - ಮುಡಾ ಪ್ರಕರಣದ ವಿಚಾರಣೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪತ್ನಿ ಪಾರ್ವತಿ ಅವರಿಗೆ ಕ್ಲೀನ್‌ಚಿಟ್ ನೀಡಿದ್ದಾರೆ.

ಈ ಬಗ್ಗೆ ಮಾತನಾಡಿರುವ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ಆರ್. ಅಶೋಕ್, ಸಿದ್ದರಾಮಯ್ಯ ಅವರಿಗೆ ಲೋಕಾಯುಕ್ತ ವರದಿಯಲ್ಲಿ ಕ್ಲೀನ್‌ಚಿಟ್ ನೀಡಿರುವುದು ನಿರೀಕ್ಷಿತ ರೀತಿಯಲ್ಲೇ ಇದೆ ಎಂದಿದ್ದಾರೆ.

ಆತ್ಮಸಾಕ್ಷಿ ಮಾರಿಕೊಂಡವರು ಮಾತ್ರ ಈ ರೀತಿಯ ವರದಿ ನೀಡಲು ಸಾಧ್ಯ ಎಂದು ಕಾರ್ಯಕರ್ತ ಹಾಗೂ ಪ್ರಕರಣದ ದೂರುದಾರ ಸ್ನೇಹಮಯಿ ಕೃಷ್ಣ ಹೇಳಿದ್ದಾರೆ. ಪ್ರಕರಣ ಕುರಿತ ಅಂತಿಮ ವರದಿಯನ್ನು ಹೈಕೋರ್ಟ್‌ಗೆ ಸಲ್ಲಿಸಿರುವುದಾಗಿ ತನಿಖಾಧಿಕಾರಿಗಳು ಹೇಳಿದ್ದಾರೆ.

ಕೃಷ್ಣ ಅವರಿಗೆ ಪತ್ರ ಬರೆದಿರುವ ಲೋಕಾಯುಕ್ತ ಪೊಲೀಸರು, ಆರೋಪಿಗಳ ವಿರುದ್ಧ ಸಾಕ್ಷಿಗಳ ಕೊರತೆ ಇರುವುದರಿಂದ ಆರೋಪ ಸಾಬೀತಾಗಿಲ್ಲ ಎಂದು ತಿಳಿಸಿದ್ದಾರೆ.

ಸಿದ್ದರಾಮಯ್ಯ ಹಾಗೂ ಅವರ ಪತ್ನಿ ಅಷ್ಟೇ ಅಲ್ಲದೆ ಪಾರ್ವತಿ ಅವರ ಸಹೋದರ ಮಲ್ಲಿಕಾರ್ಜುನ ಸ್ವಾಮಿ ಹಾಗೂ ಜಮೀನು ಮಾಲೀಕ ದೇವರಾಜು ಅವರಿಗೆ ಕ್ಲೀನ್‌ಚಿಟ್ ನೀಡಲಾಗಿದೆ.

## ಮೊದಲ ಬಾರಿಯ ಶಾಸಕಿ ರೇಖಾ ಗುಪ್ತಗೆ ದೆಹಲಿ ಸಿಎಂ ಗಾದಿ



ನವದೆಹಲಿ, ಫೆ. 19 - ಮೊದಲ ಬಾರಿ ಶಾಸಕಿಯಾಗಿರುವ ರೇಖಾ ಗುಪ್ತ ಅವರು ದೆಹಲಿಯ ನೂತನ ಮುಖ್ಯಮಂತ್ರಿ ಅಗಲಿದ್ದಾರೆ ಎಂದು ಬಿಜೆಪಿ ಘೋಷಿಸಿದೆ.

ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಅವರನ್ನು ಸದನದ ನಾಯಕರನ್ನಾಗಿ ಆಯ್ಕೆ ಮಾಡಲಾಗಿದೆ. 26 ವರ್ಷಗಳ ನಂತರ ಬಿಜೆಪಿ ದೆಹಲಿಯಲ್ಲಿ ಅಧಿಕಾರಕ್ಕೆ ಬಂದಿತ್ತು.

ಬಿಜೆಪಿ ನಾಯಕರಾದ ರವಿಶಂಕರ್ ಪ್ರಸಾದ್, ದೆಹಲಿ ಬಿಜೆಪಿ ಅಧ್ಯಕ್ಷ ವೀರೇಂದ್ರ ಸಚ್‌ದೇವ ಮತ್ತಿತರರ ಜೊತೆ ಗುಪ್ತ ಅವರು ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನ ಭೇಟಿ ಮಾಡಿ ಸರ್ಕಾರ ರಚಿಸಲು ಅನುಮತಿ ಕೋರಿದ್ದಾರೆ.

ಗುಪ್ತ ಹಾಗೂ ಸಂಪುಟದ ಸದಸ್ಯರು ಗುರುವಾರ ರಾಮಲೀಲಾ ಮೈದಾನದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ಸುಷ್ಮಾಸ್ವರಾಜ್, ಶೀಲಾ ದೀಕ್ಷಿತ್ ಹಾಗೂ ಆತಿಶಿ ನಂತರ ಗುಪ್ತ ಅವರು ದೆಹಲಿಯ ನಾಲ್ಕನೇ ಮಹಿಳಾ ಮುಖ್ಯಮಂತ್ರಿ ಆಗಿದ್ದಾರೆ.

ಪ್ರಸಕ್ತ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ ಅವರು ಏಕೈಕ ಮಹಿಳಾ ಮುಖ್ಯಮಂತ್ರಿ ಆಗಿದ್ದಾರೆ. ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಅವರು ಪಶ್ಚಿಮ ಬಂಗಾಳದಲ್ಲಿ ಮುಖ್ಯಮಂತ್ರಿ ಆಗಿದ್ದಾರೆ. ಉಪಮುಖ್ಯಮಂತ್ರಿ ಸ್ಥಾನ (5ನೇ ಪುಟಕ್ಕೆ)

## ಫಿಲಿಪ್ಪೈನ್ಸ್ ಹಳ್ಳಿಯಲ್ಲಿ ಸೊಳ್ಳೆ ತಂದವರಿಗೆ ಬಹುಮಾನ!

ಮನಿಲಾ, ಫೆ. 19 - ಫಿಲಿಪ್ಪೈನ್ಸ್ ರಾಜಧಾನಿ ಮನಿಲಾ ವಲಯದಲ್ಲಿರುವ ಜನನಿಬಿಡ ಹಳ್ಳಿಯೊಂದು ಡೆಂಗ್ಯೂ ಸಮಸ್ಯೆ ಎದುರಿಸುತ್ತಿದೆ. ಈ ಹಿನ್ನೆಲೆಯಲ್ಲಿ ಸೊಳ್ಳೆಗಳನ್ನು ತಂದವರಿಗೆ ಬಹುಮಾನ ನೀಡಲಾಗುವುದು ಎಂದು ಘೋಷಿಸಲಾಗಿದೆ.



ಮಂಡಲುಯಾಂಗ್ ಸಿಟಿ ಎಂಬ ಹಳ್ಳಿಯಲ್ಲಿ ಸೊಳ್ಳೆಗಳ ಸಮಸ್ಯೆ ನಿವಾರಣೆಗಾಗಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಈ ವರ್ಷ ಒಂದು ತಿಂಗಳಲ್ಲಿ 28 ಸಾವಿರಕ್ಕೂ ಹೆಚ್ಚು ಡೆಂಗ್ಯೂ ಪ್ರಕರಣಗಳು ಫಿಲಿಪ್ಪೈನ್ಸ್‌ನಲ್ಲಿ ಕಂಡು ಬಂದಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಇದು ಶೇಕಡ 40ರಷ್ಟು ಹೆಚ್ಚಾಗಿದೆ.

ಮಂಡಲುಯಾಂಗ್ ಸಿಟಿ ಗ್ರಾಮದಲ್ಲಿ ಲಕ್ಷದಷ್ಟು ಜನರಿದ್ದಾರೆ. ಡೆಂಗ್ಯೂ ವಿರುದ್ಧ ಹೋರಾಟ ನಡೆಸಲು ನೈರ್ಮಲ್ಯಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಆದರೂ ಈ ವರ್ಷ ಡೆಂಗ್ಯೂ ಪ್ರಕರಣಗಳು ಹೆಚ್ಚಾಗಿದ್ದು ಇಬ್ಬರು ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ.

ಈ ಹಿನ್ನೆಲೆಯಲ್ಲಿ 5 ಜೀವಂತ ಇಲ್ಲವೇ ಸತ್ತ ಸೊಳ್ಳೆಗಳನ್ನು ತಂದವರಿಗೆ ಒಂದು ಫಿಲಿಪ್ಪೈನ್ಸ್ ಪೆಸೊ ಹಣ (4ನೇ ಪುಟಕ್ಕೆ)

## 'ಆಲ್ ಈಸ್ ವೆಲ್' ನಾಟಕ ಬದಿಗಿಟ್ಟು ಆರ್ಥಿಕ ಪರಿಸ್ಥಿತಿ ಶ್ವೇತಪತ್ರ ಹೊರಡಿಸಿ

### ಮುಖ್ಯಮಂತ್ರಿಗಳಿಗೆ ವಿಜಯೇಂದ್ರ ಒತ್ತಾಯ



ಬೆಂಗಳೂರು, ಫೆ. 19- ಮುಖ್ಯಮಂತ್ರಿ ಸಿದ್ದರಾಮಯ್ಯ 'ಆಲ್ ಈಸ್ ವೆಲ್' ನಾಟಕ ಬದಿಗಿಟ್ಟು, ರಾಜ್ಯದ ಆರ್ಥಿಕ ಪರಿಸ್ಥಿತಿ ಕುರಿತು ಶ್ವೇತಪತ್ರ ಹೊರಡಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಒತ್ತಾಯಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕ್ರೋಢೀಕೃತ ಹಣ ಉಪಯೋಗ ಆಗುತ್ತಿದೆಯೇ, ದುರುಪಯೋಗ ಆಗುತ್ತಿದೆಯೇ, ಗ್ಯಾರಂಟಿಗಳಿಗೆ ನಮ್ಮ ವಿರೋಧವಿಲ್ಲ, ಅನುಷ್ಠಾನ ಆಗಲೇಬೇಕು, ಆದರೆ, ಯುವನಿಧಿ ಯೋಜನೆ ಬಗ್ಗೆ ಏಕೆ ಚಕಾರ ಎತ್ತುತ್ತಿಲ್ಲ ಎಂದರು.

ಪರಿಶಿಷ್ಟ ಜಾತಿ, ಪಂಗಡದ ಹಣ ಗ್ಯಾರಂಟಿಗಳಿಗೆ ಬಳಸಲಾಗಿದೆ ಎಂಬುದಾಗಿ ಆ ಸಮಾಜದ ಮುಖಂಡರು ಮುಖ್ಯಮಂತ್ರಿಗಳಿಗೆ ದೂರು ಸಲ್ಲಿಸಿದ್ದಾರೆ.

ಯೋಗ್ಯತೆಗೆ ಬೆಂಗಳೂರಿನ ಗುಂಡಿ ಮುಚ್ಚಲು ಸಾಧ್ಯವಾಗುತ್ತಿಲ್ಲ, ಭೂಗತ ಟನೆಲ್ ನಿರ್ಮಾಣದ ಮಾತುಗಳನ್ನು ಆಡುತ್ತಿದ್ದಾರೆ, ಶಾಸಕರಿಗೆ ಅಭಿವೃದ್ಧಿ ಅನುದಾನ ನೀಡುತ್ತಿಲ್ಲ, ಮುಖ್ಯಮಂತ್ರಿ ಸುಳ್ಳಿನ ಸರದಾರರಾಗಿದ್ದಾರೆ (4ನೇ ಪುಟಕ್ಕೆ)

## ವಿಮಾ ಕಂತಿಗೆ ಎಎಸ್‌ಬಿಎ ಸೌಲಭ್ಯಕ್ಕೆ ಐಆರ್‌ಡಿಎಐ ಸೂಚನೆ

ನವದೆಹಲಿ, ಫೆ. 19 - ಜೀವ ವಿಮೆ ಹಾಗೂ ಆರೋಗ್ಯ ವಿಮೆ ಕಂತುಗಳಿಗೆ ಎಎಸ್‌ಬಿಎ ಸೌಲಭ್ಯ ಕಲ್ಪಿಸುವಂತೆ ವಿಮಾ ಕಂಪನಿಗಳಿಗೆ ನಿಯಂತ್ರಕವಾದ ಐಆರ್‌ಡಿಎಐ ಸೂಚನೆ ನೀಡಿದೆ.

ಪಾಲಿಸಿದಾರರು ವಿಮಾ ಕಂತಿನ ಹಣವನ್ನು ಬ್ಯಾಂಕುಗಳಲ್ಲಿ ಇರಿಸುತ್ತಾರೆ. ವಿಮಾ ಪಾಲಿಸಿ ಬಿಡುಗಡೆಯಾದ ನಂತರ ಕಂಪನಿಗಳು ಈ ಹಣ ಪಡೆಯುತ್ತವೆ. ಇದಕ್ಕೆ ವಿಮಾ - ಎಎಸ್‌ಬಿಎ ಎಂದು ಕರೆಯಲಾಗುತ್ತದೆ.

ಯುಪಿಐ ಮೂಲಕ ಗ್ರಾಹಕರು ತಮ್ಮ ಕಂತಿನ ಹಣವನ್ನು ಬ್ಯಾಂಕುಗಳಲ್ಲಿ ಪ್ರತ್ಯೇಕವಾಗಿರಿಸಲು ಸಾಧ್ಯವಿದೆ.

## ಕಾಮಗಾರಿಗಳಿಗೆ ಸಚಿವ ಎಸ್ಸೆಸ್ಸೆಂ ಚಾಲನೆ



ದಾವಣಗೆರೆ, ಫೆ.19- ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕಾ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್ ಮಲ್ಲಿಕಾರ್ಜುನ್ ಅವರು ನಗರದ ವಿವಿಧ ಭಾಗಗಳಲ್ಲಿ ಅಂದಾಜು ಕೋಟಿ ರೂ. ವೆಚ್ಚದಲ್ಲಿ ಹಮ್ಮಿಕೊಂಡಿದ್ದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದರು.

ನಗರದ ವಾರ್ಡ್ ನಂ.44 ರಲ್ಲಿ ಬರುವ ಮಹಾಲಕ್ಷ್ಮಿ ಬಡಾವಣೆ ಮುಖ್ಯ ರಸ್ತೆಯಲ್ಲಿ ಸಿ.ಸಿ ರಸ್ತೆ ಅಭಿವೃದ್ಧಿ ಕಾಮಗಾರಿ, ವಾರ್ಡ್ ನಂ.19 ದಾವಣಗೆರೆ ಮಹಾನಗರ ಪಾಲಿಕೆಯ ಚಾಮರಾಜಪೇಟೆ ಸರ್ಕಲ್ ಹತ್ತಿರ ಇರುವ ಕೆ.ಆರ್. ಮಾರುಕಟ್ಟೆ ಕಟ್ಟಡಕ್ಕೆ ರ್‍ಯಾಂಪ್ ನಿರ್ಮಾಣ ಕಾಮಗಾರಿ, ವಾರ್ಡ್ ನಂ.41 ದಾವಣಗೆರೆ ವ್ಯಾಪ್ತಿಯ ಪೂನಾ-ಬೆಂಗಳೂರು ರಸ್ತೆಯಲ್ಲಿರುವ ದೋಬಿಘಾಟ್‌ಗೆ ವಿದ್ಯುತ್ ಲಾಂಡ್ರಿ ಮಿಷಿನ್ ಅಳವಡಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿಗಳಿಗೆ ಚಾಲನೆ ಉತ್ತಮ ಕಾಮಗಾರಿ ನಡೆಸುವಂತೆ ಸಂಬಂಧಿಸಿದವರಿಗೆ ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಡಾ.ಗಂಗಾಧರ ಸ್ವಾಮಿ, ಮೇಯರ್ ಕೆ.ಚಮನ್ ಸಾಬ್, ಪಾಲಿಕೆಯ ಆಯುಕ್ತರಾದ ರೇಣುಕಾ, ಪಾಲಿಕೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಸುಧಾ ಇಟ್ಟಿಗುಡಿ ಮಂಜುನಾಥ್, ಸವಿತಾ ಗಣೇಶ್ ಹುಲ್ಲುಮನೆ, ಪಾಲಿಕೆ ಸದಸ್ಯರಾದ ಎ. ನಾಗರಾಜ್, ರಹೀಖಾನ್, ಕಾಂಗ್ರೆಸ್ ಮುಖಂಡರಾದ ಮಾಗಾನಹಳ್ಳಿ ಪರಶುರಾಮ್, ಕಾರ್ಮಿಕ ಮುಖಂಡ ಆವರಗೆರೆ ಉಮೇಶ್ ಇತರರಿದ್ದರು.

## ನಗರ ಪಾಲಿಕೆ ಆಡಳಿತಾಧಿಕಾರಿಯಾಗಿ ಪ್ರಾದೇಶಿಕ ಆಯುಕ್ತ ಅಮ್ಲಾನ್ ಬಿಸ್ವಾಸ್



ದಾವಣಗೆರೆ, ಫೆ.19- ದಾವಣಗೆರೆ ಮಹಾನಗರ ಪಾಲಿಕೆ ಆಡಳಿತಾಧಿಕಾರಿಯನ್ನಾಗಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರನ್ನು ನೇಮಕ ಮಾಡಿ ಸರ್ಕಾರ ಇಂದು ಆದೇಶ ಹೊರಡಿಸಿದೆ.

ಮಹಾನಗರ ಪಾಲಿಕೆಯ ಚುನಾಯಿತ ಆಡಳಿತ ಮಂಡಳಿಯ ಅವಧಿಯು ಇಂದು ಮುಕ್ತಾಯಗೊಂಡ ಹಿನ್ನೆಲೆಯಲ್ಲಿ ಹೊಸ ಚುನಾಯಿತ ಆಡಳಿತ ಮಂಡಳಿ ಅಸ್ತಿತ್ವಕ್ಕೆ ಬರುವ ತನಕ ಆಡಳಿತಾತ್ಮಕ ಹಿತದೃಷ್ಟಿಯಿಂದ ಆಡಳಿತಾಧಿಕಾರಿಯನ್ನು ನೇಮಕ ಮಾಡಲಾಗಿದೆ ಎಂದು ಸರ್ಕಾರದ ನಗರಾಭಿವೃದ್ಧಿ ಇಲಾಖೆ ಅಧೀನ ಕಾರ್ಯದರ್ಶಿ ಟಿ. ಮಂಜುನಾಥ ತಮ್ಮ ಆದೇಶದಲ್ಲಿ ತಿಳಿಸಿದ್ದಾರೆ.

## ಸಂಗಮದ ನೀರು ಸ್ನಾನಕ್ಕೆ ಯೋಗ್ಯ

ಲಕ್ನೋ, ಫೆ. 19 – ಮಹಾಕುಂಭ ಮೇಳ ನಡೆಯುತ್ತಿರುವ ಸಂಗಮದಲ್ಲಿನ ನೀರು ಸ್ನಾನ ಹಾಗೂ ಅಚಮನಕ್ಕೆ ಯೋಗ್ಯವಾಗಿದೆ ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಿಳಿಸಿದ್ದಾರೆ.

ಈ ನೀರಿನಲ್ಲಿ ಫೇಕಲ್ ಬ್ಯಾಕ್ಟೀರಿಯಾ ಅಂಶ ಹೆಚ್ಚಾಗಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿ ನಿರಂತರವಾಗಿ ಸಂಗಮದ ನೀರಿನ ಮೇಲೆ ನಿಗಾ ವಹಿಸಿದೆ ಎಂದು ಆದಿತ್ಯನಾಥ ಅವರು ವಿಧಾನಸಭೆಯಲ್ಲಿ ಹೇಳಿಕೆ ನೀಡಿದ್ದಾರೆ.

ನೀರಿನ ಗುಣಮಟ್ಟದ ಬಗ್ಗೆ ಪ್ರತಿಪಕ್ಷಗಳು ಮಾಡಿರುವ ಟೀಕೆಯನ್ನು ತಳ್ಳಿ ಹಾಕಿರುವ ಆದಿತ್ಯನಾಥ್, 2013ರ ಕುಂಭಮೇಳದ ವೇಳೆ ನೀರು ಯಾವ ರೀತಿ ಇತ್ತು ಎಂದರೆ ಮಾರಿಷಸ್ ಪ್ರಧಾನಮಂತ್ರಿ ಸ್ನಾನ ಮಾಡಲು ನಿರಾಕರಿಸಿದ್ದರು ಎಂದಿದ್ದಾರೆ.

ಈ ಬಾರಿ 81 ಕೊಳಚೆ ಮಾರ್ಗಗಳನ್ನು ಶುದ್ಧೀಕರಣಕ್ಕೆ ಒಳಪಡಿಸಲಾಗಿದೆ. ಪ್ರತಿದಿನ 261 ಎಂಎಲ್ಡಿ ಕೊಳಚೆ ನೀರನ್ನು ಶುದ್ಧೀಕರಿಸಲಾಗುತ್ತಿದೆ. ಸಂಗಮದಲ್ಲಿ ಕಂಡು ಬಂದಿರುವ (4ನೇ ಪುಟಕ್ಕೆ)

## ಆಂಧ್ರದಲ್ಲಿ ಮುಸ್ಲಿಂ ನೌಕರರಿಗೆ ರಂಜಾನ್ ಬಿಡುವು; ಬಿಜೆಪಿ ಸ್ವಾಗತ

ಅಮರಾವತಿ, ಫೆ. 19 - ರಂಜಾನ್ ಅವಧಿಯಲ್ಲಿ ಮುಸ್ಲಿಂ ಉದ್ಯೋಗಿಗಳು ನಿಗದಿತ ಸಮಯಕ್ಕಿಂತ ಒಂದು ಗಂಟೆ ಮುಂಚೆ ಕಚೇರಿಯಿಂದ ತೆರಳಲು ಆಂಧ್ರಪ್ರದೇಶದ ಟಿಡಿಪಿ ನೇತೃತ್ವದ ಎನ್‌ಡಿಎ ಸರ್ಕಾರ ಅನುಮತಿ ನೀಡಿದೆ.

ಸರ್ಕಾರದ ಕ್ರಮವನ್ನು ರಾಜ್ಯ ಬಿಜೆಪಿ ಘಟಕ ಸ್ವಾಗತಿಸಿದೆ. ನಿನ್ನೆಯಷ್ಟೇ ಪಕ್ಕದ ತೆಲಂಗಾಣದ ಕಾಂಗ್ರೆಸ್ ನೇತೃತ್ವದ ಸರ್ಕಾರ ಇದೇ ರೀತಿಯ ಅನುಮತಿ ನೀಡಿದ್ದನ್ನು ಬಿಜೆಪಿ ಟೀಕಿಸಿತ್ತು.

ಆಂಧ್ರಪ್ರದೇಶದ ಮೈತ್ರಿ ಸರ್ಕಾರ ಮುಸ್ಲಿಂ ನೌಕರರಿಗೆ ನೀಡಿರುವ ವಿನಾಯಿತಿಯನ್ನು ಸ್ವಾಗತಿಸಿರುವ ಬಿಜೆಪಿ ನಾಯಕಿ (4ನೇ ಪುಟಕ್ಕೆ)

## ಕುಂಭಮೇಳದಲ್ಲಿ ಜಲಮಾಲಿನ್ಯ

### ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿಗೆ ಎನ್‌ಜಿಟಿ ತರಾಟೆ

ನವದೆಹಲಿ,ಫೆ. 19 - ಉತ್ತರ ಪ್ರದೇಶದ ಕುಂಭಮೇಳ ನಡೆಯುತ್ತಿರುವ ಪ್ರಯಾಗ್ ರಾಜ್ ಪ್ರದೇಶದ ಹಲವೆಡೆ ಸಂಗ್ರಹಿಸಲಾದ ಮಾದರಿಗಳಲ್ಲಿ ಫೇಕಲ್ ಕಾಲಿಫಾರಂ ಮಾಲಿನ್ಯ ಹೆಚ್ಚಾಗಿರುವ ಬಗ್ಗೆ ಉತ್ತರ ಪ್ರದೇಶ ಮಾಲಿನ್ಯ ನಿಯಂತ್ರಣ ಮಂಡಳಿ ನಿಲುವನ್ನು ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ (ಎನ್‌ಜಿಟಿ) ತರಾಟೆಗೆ ತೆಗೆದುಕೊಂಡಿದೆ.

ಈ ಪ್ರದೇಶಗಳಲ್ಲಿ ಜಲಮಾಲಿನ್ಯ ಹೆಚ್ಚಾಗಿದೆ ಎಂಬ ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯನ್ನು ಉತ್ತರ ಪ್ರದೇಶ ಮಂಡಳಿ ಪ್ರಶ್ನಿಸುತ್ತದೆಯೇ? ಎಂದು ಎನ್‌ಜಿಟಿ ಕೇಳಿದೆ.

ಪ್ರಯಾಗ್‌ರಾಜ್‌ನಲ್ಲಿ ಜಲ ಮಾಲಿನ್ಯಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸುವಾಗ ಎನ್‌ಜಿಟಿ ಅಧ್ಯಕ್ಷ ನ್ಯಾಯಮೂರ್ತಿ ಪ್ರಕಾಶ್ (3ನೇ ಪುಟಕ್ಕೆ)

# ಮಲೇಬೆನ್ನೂರಿನಿಂದ ಕೊಟ್ಟೂರಿಗೆ ಪಾದಯಾತ್ರೆ



ಮಲೇಬೆನ್ನೂರು, ಫೆ. 19- ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ಮಹಾಸ್ವಾಮಿಗಳ ರಥೋತ್ಸವಕ್ಕೆ ಮಲೇಬೆನ್ನೂರಿನ ಭಕ್ತರು ಮಂಗಳವಾರ ಸಂಜೆ ಬಸವೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಪಾದಯಾತ್ರೆ ಆರಂಭಿಸಿದರು. ಪಿಗ್ಮಿ ಏಜೆಂಟ್ ರಾಜು (ಕೆಬಿಆರ್) ಅವರ ನೇತೃತ್ವದಲ್ಲಿ ಪೇಂಟ್ ಸತೀಶ್, ಮಧು, ದೀಪು, ಗುಳದಹಳ್ಳಿ ಕೊಟ್ರೇಶ್, ಮಂಜು, ನಿಖಿಲ್, ಶಾಂತಮ್ಮ, ಮಾಲಾ, ಶಾಂತಾ, ಯೋಗೀಶ್, ರಾಕೇಶ್ ಸೇರಿದಂತೆ ಮತ್ತಿತರೆ ಭಕ್ತರು ಪಾದಯಾತ್ರೆಯಲ್ಲಿದ್ದಾರೆ. ಇದು ಇವರ 19ನೇ ವರ್ಷದ ಪಾದಯಾತ್ರೆ ಆಗಿರುತ್ತದೆ.

# ಬನ್ನಿಕೋಡು ಶಾಲೆಯಲ್ಲಿ ಗುರುವಂದನೆ ಕಾರ್ಯಕ್ರಮ



ಹರಿಹರ, ಫೆ.19- ತಾಲ್ಲೂಕಿನ ಬನ್ನಿಕೋಡು ಗ್ರಾಮದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಈಚೆಗೆ 2008-09ನೇ ಸಾಲಿನ ಎಸ್ಸೆಸ್ಸೆಲ್ಸಿ ಹಳೇ ವಿದ್ಯಾರ್ಥಿಗಳಿಂದ ಗುರುವಂದನಾ ಕಾರ್ಯಕ್ರಮ ನಡೆಯಿತು. ಇದೇ ವೇಳೆ ಸಾಧನೆಗೈದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು. ಬನ್ನಿಕೋಡು, ಬೇವಿನಹಳ್ಳಿ ಮತ್ತು ಸಲಗನಹಳ್ಳಿ ಗ್ರಾಮದ ಹಳೇ ವಿದ್ಯಾರ್ಥಿಗಳು ಇದ್ದರು.

ಕಾರ್ಯಕ್ರಮದ ವೇಳೆ ಭೂ-ದಾನಿಗಳಾದ ಕುಲ್ಡಾಲಪ್ಪರ ಬಸಪ್ಪ, ಪಾರವರ್ ಸಂಕಪ್ಪ ಮತ್ತು ಮಕ್ಕಳು, ನಿವೃತ್ತ ಶಿಕ್ಷಕ ಟಿ. ಚನ್ನಬಸಪ್ಪ, ನಿವೃತ್ತ ಶಿಕ್ಷಕರಾದ ಬಿ. ಉಮೇಶ್, ಎ. ಅನ್ನಪೂರ್ಣ, ಟಿ. ಚನ್ನಬಸಪ್ಪ, ಬಿ.ಎಸ್ ಶಿಲ್ಪ, ಉಮಾ ಪಾಳ್ಯದ, ಪ್ರಮೋದ್ ಪಾಟೀಲ್, ಶಿಕ್ಷಕರಾದ ಹೆಚ್. ಸುಧಾ, ಆರ್. ಸುಧಾ, ಟಿ.ಎಂ. ಜ್ಯೋತಿ ಇದ್ದರು.

# ಹುಲ್ಲುಗಾವಲಿಗೆ ಬೆಂಕಿ : 25 ಸಾಲು ಮರಗಳು ಆಹುತಿ - 6 ವರ್ಷದ ಶ್ರಮ ನಿರರ್ಥಕ




ಹರಿಹರ, ಫೆ. 19 - ನಗರದ ಹೊರವಲಯದ ದಾವಣಗೆರೆ ಮಾರ್ಗದ ಜೋಡಿ ರಸ್ತೆ ಮಧ್ಯದ ಹುಲ್ಲುಗಾವಲಿಗೆ ಬೆಂಕಿ ಬಿದ್ದು 25ಕ್ಕೂ ಹೆಚ್ಚು ಸಾಲು ಮರಗಳು ಆಹುತಿಯಾಗಿರುವ ಘಟನೆ ಮೊನ್ನೆ ನಡೆದಿದೆ.

1ನೇ ರೈಲ್ವೆ ಗೇಟಿನಿಂದ 2ನೇ ಗೇಟ್‌ವರೆಗಿನ ಅಂದಾಜು 2 ಕಿ. ಮೀ. ಜೋಡಿ ರಸ್ತೆ ಮಧ್ಯದಲ್ಲಿ ಅಂದಾಜು 200 ಸಾಲು ಮರಗಳಿವೆ. ಏಳೆಂಟು ವರ್ಷಗಳ ಹಿಂದೆ ದೊಡ್ಡಬಾತಿ ತಪೋವನ ಸಂಸ್ಥೆಯವರು ಲಕ್ಷಾಂತರ ಅನುದಾನ ವೆಚ್ಚ ಮಾಡಿ ಟ್ರೀ ಗಾರ್ಡ್‌ಗಳನ್ನು ಅಳವಡಿಸಿ ಸಸಿ ನೆಟ್ಟಿದ್ದರು. ಆ ಸಸಿಗಳು ಬಾಡಿದ ನಂತರ ಬೇರೆ, ಬೇರೆ ಸಂಸ್ಥೆಯವರು ಮತ್ತೆ ಸಸಿ ನೆಟ್ಟಿದ್ದರು. ಹೀಗೆ ಆರೇಳು ವರ್ಷಗಳಿಂದ ಏಳೆಂಟು ಅಡಿಗಳ ಎತ್ತರಕ್ಕೆ ಈ ಭಾಗದಲ್ಲಿ ಸಾಲು ಮರಗಳು ಬೆಳೆದಿದ್ದವು. ಡಿಜಿಆರ್ ರೆಸಾರ್ಟ್ ಕಡೆಯಿಂದ ಅಂದಾಜು 300 ಮೀ.ವರೆಗಿನ ಹುಲ್ಲುಗಾವಲಿಗೆ ಬೆಂಕಿ ಬಿದ್ದಿದ್ದು ಆ ಭಾಗದಲ್ಲಿನ ಮರಗಳು ಆಹುತಿಯಾಗಿವೆ.

ಹರಿಹರ-ದಾವಣಗೆರೆ ಮಧ್ಯ ಸಂಚರಿಸುವ ಸಾವಿರಾರು ವಾಹನ ಸವಾರರಿಗೆ ತಂಪನೆ ವಾತಾವರಣ ನೀಡುತ್ತಿದ್ದ ಮರಗಳು ಆಹುತಿಯಾಗಿರುವುದು ಪರಿಸರ ಪ್ರೇಮಿಗಳಿಗೆ ಹಾಗೂ ಸಾರ್ವಜನಿಕರಲ್ಲಿ ಬೇಸರ ಮೂಡಿಸಿದೆ.

**ಕಾರಣ ಏನು? :** ಯಾವುದೋ ವಾಹನ ಸವಾರರು ಬೀಡಿ, ಸಿಗರೇಟು ಸೇದಿ ಬಿಸಾಕಿದ್ದರಿಂದ ಅಥವಾ ಯಾರಾದರು ಉದ್ದೇಶ ಪೂರ್ವಕವಾಗಿಯೂ ಬೆಂಕಿ ಹಚ್ಚಿರಬಹುದೆಂದು ಅಂದಾಜಿಸಲಾಗಿದೆ. ಈ ಜೋಡಿ ರಸ್ತೆಯ ಮಧ್ಯ ಭಾಗದಲ್ಲಿ ಇನ್ನೂ 150ಕ್ಕೂ ಹೆಚ್ಚು ಮರಗಳು ಅಂದಾಜು 1.5 ಕಿ.ಮೀ. ಉದ್ದದ ವ್ಯಾಪ್ತಿಯಲ್ಲಿವೆ. ಆ ಭಾಗದಲ್ಲೂ ದಟ್ಟವಾದ ಹುಲ್ಲಿನ ಪೊದೆ ಇವೆ. ಈ ಹುಲ್ಲುಗಾವಲು ಪ್ರಖರ ಬಿಸಿಲಿಗೆ ಒಣಗಿದ್ದು ಅಲ್ಲಿಯೂ ಬೆಂಕಿ ಬೀಳುವ ಅಪಾಯವಿದೆ. ಸಸಿಗಳನ್ನು ನೆಟ್ಟಿರುವ ಸೇವಾ ಸಂಸ್ಥೆಯವರಿಗೆ ಹೇಳಿ ಬೆಳೆದಿರುವ ಹುಲ್ಲುಗಾವಲು ಕೀಳಿಸುವ ಪ್ರಯತ್ನ ಮಾಡುತ್ತೇನೆಂದು ಸಾಮಾಜಿಕ ಅರಣ್ಯ ಇಲಾಖೆ ಆರ್‌ಎಫ್‌ಓ ಟಿ. ಆರ್.ಅಮೃತ ಪತ್ರಿಕೆಗೆ ತಿಳಿಸಿದರು.

ಇಲ್ಲಿನ ತಪೋವನ ಸಂಸ್ಥೆಯವರು ಅಳವಡಿಸಿರುವ ದುಬಾರಿ ಬೆಲೆಯ ಹಲವು ಟ್ರೀ ಗಾರ್ಡ್‌ಗಳನ್ನು ಕೆಲವರು ಹೊತ್ತೊಯ್ದಿದ್ದಾರೆ. ಈ ಭಾಗದ ಸಾಲು ಮರಗಳ ರಕ್ಷಣೆಗೆ ಸಾರ್ವಜನಿಕರು ಹಾಗೂ ಸರ್ಕಾರಿ ಇಲಾಖಾಧಿಕಾರಿಗಳೂ ಕೂಡ ಆದ್ಯತೆ ನೀಡಬೇಕೆಂದು ಪರಿಸರಕ್ಕಾಗಿ ನಾವು ಸಂಸ್ಥೆಯ ಜಿಲ್ಲಾ ಸಂಚಾಲಕ ಬಿ ಫಾರ್ ಬ್ಯಾಂಬೂ ಜಬಿವುಲ್ಲಾ ಅಭಿಪ್ರಾಯ ಪಟ್ಟಿದ್ದಾರೆ.

# ನಗರದಲ್ಲಿ ಇಂದು 'ಮಾನವತೆಯ ಬೆಳಕು-ಜಗಳೂರು ಮಹಮದ್ ಇಮಾಂ' ಪುಸ್ತಕ ಬಿಡುಗಡೆ



ದಾವಣಗೆರೆ, ಫೆ.19- ಜೆ.ಎಂ.ಇಮಾಂ ಟ್ರಸ್ಟ್ ಹಾಗೂ ಜೆ.ಎಂ. ಇಮಾಂ ಸ್ಮಾರಕ ಶಾಲೆ ಜಗಳೂರು ಇವರ ವತಿಯಿಂದ ನಾಳೆ ದಿನಾಂಕ 20 ರ ಗುರುವಾರ ಬೆಳಿಗ್ಗೆ 11 ಗಂಟೆಗೆ ನಗರದ ಕುವೆಂಪು ಕನ್ನಡ ಭವನದಲ್ಲಿ 'ಮಾನವತೆಯ ಬೆಳಕು- ಜಗಳೂರು ಮಹಮದ್ ಇಮಾಂ' ಪುಸ್ತಕ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪುಸ್ತಕ ಸಂಪಾದನಾ ಸಮಿತಿಯ ಪ್ರಧಾನ ಸಂಪಾದಕರೂ, ಸಾಹಿತಿಯೂ ಆದ ಎನ್.ಟಿ. ಯರ್ರಿಸ್ವಾಮಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ವಿಧಾನಸಭಾ ಸಭಾಧ್ಯಕ್ಷ ಯು.ಟಿ.ಖಾದರ್ ಕೃತಿ ಲೋಕಾರ್ಪಣೆ ಮಾಡಲಿದ್ದಾರೆ. ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಪುಸ್ತಕದ ಪ್ರಥಮ ಪ್ರತಿ ಹಸ್ತಾಂತರ ಮಾಡುವರು. ಕೃತಿ ಕುರಿತು ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ರಾಜೇಂದ್ರ ಚೆನ್ನಿ ಮಾತನಾಡಲಿದ್ದಾರೆ.

ಜೆ.ಎಂ. ಇಮಾಂ ಟ್ರಸ್ಟ್ ಜಗಳೂರು ಇದರ ಗೌರವಾಧ್ಯಕ್ಷರೂ, ಪುಸ್ತಕ ಸಪಾದನಾ ಸಮಿತಿಯ ಗೌರವ ಸಂಪಾದಕರೂ ಆದ ಕೆ. ಹುಸೇನ್ ಮಿಯ್ಯಾ ಸಾಬ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಲೋಕಸಭಾ ಸದಸ್ಯರಾದ ಡಾ.ಪ್ರಭಾ ಮಲ್ಲಿಕಾರ್ಜುನ್, ಶಾಸಕರಾದ ಬಿ.ದೇವೇಂದ್ರಪ್ಪ, ಕೆ.ಎಸ್.ಬಸವಂತಪ್ಪ, ವಿಧಾನಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್, ಮಹಾನಗರ ಪಾಲಿಕೆ ಮೇಯರ್ ಕೆ. ಚಮನ್ ಸಾಬ್, ಕರ್ನಾಟಕ ರಾಜ್ಯ ಪಿಂಜಾರ್, ನದಾಫ್ ಸಂಘದ ಚಿತ್ರದುರ್ಗ ಜಿಲ್ಲಾಧ್ಯಕ್ಷ ಜಲೀಲ್ ಸಾಬ್, ಉದ್ಯಮಿ ಹೆಚ್.ಇ. ದಾದಾ ಖಲಂದರ್ ಮತ್ತಿತರರು ಆಗಮಿಸಲಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಡಾ. ದಾದಾಪೀರ್ ನವಿಲೇಹಾಳ್, ಎನ್. ಹಾಲಪ್ಪ, ಆರ್. ಖಾಸಿಂಸಾಬ್ ಉಪಸ್ಥಿತರಿದ್ದರು.

# ಆನಗೋಡು ಬೆಸ್ಕಾಂ ಕಚೇರಿ ಮುಂದೆ ಇಂದು ಧರಣಿ ಸತ್ಯಾಗ್ರಹ

ದಾವಣಗೆರೆ, ಫೆ. 19- ಲೋಡ್ ಶೆಡ್ಡಿಂಗ್ ನೆಪದಲ್ಲಿ ಸಮರ್ಪಕ ವಿದ್ಯುತ್ ಸರಬರಾಜು ಮಾಡದಿರುವುದನ್ನು ವಿರೋಧಿಸಿ ನಾಳೆ ದಿನಾಂಕ 20 ರ ಗುರುವಾರ ತಾಲ್ಲೂಕಿನ ಆನಗೋಡು ಬೆಸ್ಕಾಂ ಕಚೇರಿ ಮುಂದೆ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘದ ತಾಲ್ಲೂಕು ಅಧ್ಯಕ್ಷ ಮಂಡ್ಲೂರು ವಿಶ್ವನಾಥ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆನಗೋಡು ಬೆಸ್ಕಾಂ ವ್ಯಾಪ್ತಿಯಲ್ಲಿ ಗ್ರಾಮಗಳ ಕೃಷಿ ಪಂಪ್ ಸೆಟ್‌ಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುತ್ತಿಲ್ಲ. ಅಧಿಕಾರಿಗಳನ್ನು ಕೇಳಿದರೆ ಲೋಡ್ ಶೆಡ್ಡಿಂಗ್ ನೆಪ ಹೇಳಲಾಗುತ್ತದೆ ಎಂದು ದೂರಿದರು

ಕಳಪೆ ಗುಣಮಟ್ಟದ ವಿದ್ಯುತ್ ಪೂರೈಕೆ ಕಾರಣದಿಂದ ಪ್ರತಿ ದಿನ ಐದಾರು ಬಾರಿ ಲೋಡ್‌ಶೆಡ್ಡಿಂಗ್ ನಿಂದ ಪಂಪ್‌ಸೆಟ್ ಸುಟ್ಟು ಹೋಗುತ್ತಿವೆ. ಈ ಬಗ್ಗೆ ಅನೇಕ ಬಾರಿ ಗಮನಕ್ಕೆ ತಂದರೂ ಉದಾಸೀನತೆ ಮಾಡಲಾಗುತ್ತಿದೆ ಎಂದು ಹೇಳಿದರು.

ಹೊಸಹಳ್ಳಿ ಸ್ಟೇಷನ್ ಪ್ರಾರಂಭಿಸಿದರೆ ಸಮಸ್ಯೆ ಬಗೆಹರಿಯುತ್ತದೆ. ಆದರೆ ಅನೇಕ ಬಾರಿ ಮುಂದೂಡಲಾಗುತ್ತಿದೆ. ಎಲ್ಲವನ್ನೂ ವಿರೋಧಿಸಿ ಗುರುವಾರ ಬೆಳಿಗ್ಗೆ 11 ಕ್ಕೆ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಹೇಳಿದರು.

ಸಂಘದ ಅಧ್ಯಕ್ಷ ಎಸ್.ಜಿ. ರಮೇಶ್, ಎನ್.ವಿ. ನಾಗರಾಜಪ್ಪ, ಶಿವಕುಮಾರ್, ಸಿದ್ಧಪ್ಪ, ಎಂ. ನವೀನ, ಸಿದ್ಧಲಿಂಗಪ್ಪ ಉಪಸ್ಥಿತರಿದ್ದರು.

# ಅರಸೀಕೆರೆಯಲ್ಲಿ ಇಂದು ಕೊಟ್ಟೂರು ಪಾದಯಾತ್ರಿಗಳಿಗೆ ಔಷಧೋಪಚಾರ



ಕೊಟ್ಟೂರು ಗುರುಬಸವ ರಾಜೇಂದ್ರ ಸ್ವಾಮಿ ಪಾದಯಾತ್ರೆ ಟ್ರಸ್ಟ್ ವತಿಯಿಂದ ಇಂದು 46ನೇ ವರ್ಷದ ಸಮಗ್ರ ಪಾದಯಾತ್ರೆ ಬೀಳ್ಕೊಡುವ ಸಮಾರಂಭ ಹಾಗೂ '27ನೇ ವರ್ಷದ ಔಷಧೋಪಚಾರ ಸೇವೆಯ ಸಮಾರೋಪ' ನಡೆಯಲಿದೆ.

ಇಂದು ಸಂಜೆ 5 ಗಂಟೆಗೆ ಅರಸೀಕೆರೆ ಕೋಲಶಾಂತೇಶ್ವರ ವಿರಕ್ತಮಠದಲ್ಲಿ '27ನೇ ವರ್ಷದ ಔಷಧೋಪಚಾರ ಸೇವೆಯ ಸಮಾರೋಪ' ನಡೆಯಲಿದ್ದು, ಕೋಲಶಾಂತೇಶ್ವರ ವಿರಕ್ತ ಮಠದ ಶಾಂತಲಿಂಗ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

ಪಾದಯಾತ್ರೆ ಟ್ರಸ್ಟಿನ ಗೌರವಾಧ್ಯಕ್ಷ ಡಾ.ಅಥಣಿ ಎಸ್. ವೀರಣ್ಣ, ಜಿ.ಎ. ಗಂಗಾಧರ ಸ್ವಾಮಿ, ಜಿ.ಪಿ. ರವಿ ಪ್ರಸಾದ್, ಡಾ.ಕೆ. ಸಿದ್ದಪ್ಪ, ಎಂ.ಎಸ್. ಗೀತಾ, ಎಸ್.ಆರ್. ಪ್ರಸನ್ನ ಕುಮಾರ್, ಡಾ.ಬಿ.ಯು. ಯೋಗೇಂದ್ರ ಕುಮಾರ್ ಪಾಲ್ಗೊಳ್ಳಲಿದ್ದಾರೆ.

# ಹಲವು ದಿನ ಸಂಗಮದ ಜಲ ಸ್ನಾನಕ್ಕೆ ಅಸುರಕ್ಷಿತ : ಸರ್ಕಾರಿ ದತ್ತಾಂಶ

ನವದೆಹಲಿ, ಫೆ. 19 - ಮಹಾಕುಂಭಮೇಳ ನಡೆಯುತ್ತಿರುವ ಸಂಗಮದಲ್ಲಿ ನೀರಿನಲ್ಲಿ ಬಯಾಲಜಿಕಲ್ ಆಕ್ಸಿಜನ್ ಡಿಮ್ಯಾಂಡ್ (ಬಿಒಡಿ) ಅಂಶ ಹೆಚ್ಚಾಗಿದೆ. ಇದರಿಂದಾಗಿ ಹಲವು ದಿನ ಇಲ್ಲಿನ ನೀರು ಸ್ನಾನಕ್ಕೆ ಅಸುರಕ್ಷಿತವಾಗಿತ್ತು ಎಂದು ಸರ್ಕಾರಿ ದತ್ತಾಂಶಗಳು ತಿಳಿಸಿವೆ.

ನೀರಿನಲ್ಲಿರುವ ಸೂಕ್ಷ್ಮಾಣು ಜೀವಿಗಳಿಗೆ ಅಗತ್ಯವಾದ ಆಕ್ಸಿಜನ್ ಪ್ರಮಾಣವನ್ನು ಬಿಒಡಿ ಮೂಲಕ ಗುರುತಿಸಲಾಗುತ್ತದೆ. ಆಕ್ಸಿಜನ್ ಅಂಶ ನಿಗದಿತ ಪ್ರಮಾಣದಲ್ಲಿ ಇದ್ದಾಗ ಮಾತ್ರ ಸೂಕ್ಷ್ಮಾಣು ಜೀವಿಗಳು ಜೈವಿಕ ಅಂಶಗಳನ್ನು ವಿಭಜಿಸಲು ಸಾಧ್ಯವಾಗುತ್ತದೆ. ಪ್ರತಿ ಲೀಟರ್‌ಗೆ 3 ಮಿಲಿ ಗ್ರಾಂಗಿಂತ ಕಡಿಮೆ ಬಿಒಡಿ ಇದ್ದಾಗ ಮಾತ್ರ ನೀರು ಸ್ನಾನಕ್ಕೆ ಸೂಕ್ತ ಎಂದು ಭಾವಿಸಲಾಗುತ್ತದೆ. ಸಂಗಮದಲ್ಲಿನ ನೀರಿನಲ್ಲಿ ಜನವರಿ 26ರಂದು 5.09 ಮಿಲಿ ಗ್ರಾಂ ಬಿಒಡಿ ಇತ್ತು. ಇದು ಜನವರಿ 19ರ ವೇಳೆಗೆ 5.29 ಮಿಲಿ ಗ್ರಾಂಗಳಿಗೆ ತಲುಪಿತ್ತು

ಜನವರಿ 29ರ ಮೌನಿ ಅಮಾವಾಸ್ಯೆ ದಿನದಂದು ಬಿಒಡಿ ಪ್ರಮಾಣ 3.26 ಮಿಲಿ ಗ್ರಾಂ ಆಗಿತ್ತು.

ರಾಷ್ಟ್ರೀಯ ಹಸಿರು ನ್ಯಾಯಾಧಿಕರಣಕ್ಕೆ ಸಲ್ಲಿಸಲಾಗಿರುವ ವರದಿ ಪ್ರಕಾರ, ಫೆಬ್ರವರಿ 3ರಂದು ಸಂಗಮದ ನೀರು ಸ್ನಾನದ ಮಾನದಂಡಗಳಿಗೆ ಅನುಗುಣವಾಗಿ ಇರಲಿಲ್ಲ. ಆದರೆ, ಜನವರಿ 14ರ ಮಕರ ಸಂಕ್ರಾಂತಿ ದಿನದಂದು ನೀರಿನ ಗುಣಮಟ್ಟ ಸುಧಾರಿಸಿ, ಬಿಒಡಿ ಅಂಶ 2.28 ಮಿಲಿ ಗ್ರಾಂಗಳಿಗೆ ತಲುಪಿತ್ತು. ಜನವರಿ 25ರಂದು ಇದು 1 ಮಿಲಿ ಗ್ರಾಂ ಆಗಿತ್ತು.

ನಿರಂತರವಾಗಿ ತಾಜಾ ನೀರು ಹರಿಸುತ್ತಿರುವ ಕಾರಣ ನೀರಿನ ಗುಣಮಟ್ಟದಲ್ಲಿ ಸುಧಾರಣೆಯಾಗಿದೆ ಎಂದೂ ವರದಿಯಲ್ಲಿ ತಿಳಿಸಲಾಗಿದೆ.

## ನಾಳೆ ಶ್ರೀ ತೋಂಟದ ಸಿದ್ದಲಿಂಗ ಶ್ರೀಗಳ ಜಯಂತಿ



ಗದಗ, ಫೆ.19- ಇಲ್ಲಿನ ಶ್ರೀ ತೋಂಟದಾರ್ಯ ಮಠದ ಲಿಂ. ಶ್ರೀ ಡಾ. ತೋಂಟದ ಸಿದ್ದಲಿಂಗ ಮಹಾಸ್ವಾಮಿಗಳವರ 76ನೇ ಜಯಂತಿ ಅಂಗವಾಗಿ ಭಾವೈಕ್ಯತಾ ದಿನಾಚರಣೆ, ಪೂಜ್ಯ ಶ್ರೀಗಳ ಕುರಿತು ಗ್ರಂಥಗಳ ಬಿಡುಗಡೆ ಸಮಾರಂಭವು ನಾಡಿದ್ದು ದಿನಾಂಕ 21ರ ಶುಕ್ರವಾರ ಬೆಳಿಗ್ಗೆ 10.30ಕ್ಕೆ ಗದುಗಿನ ಶ್ರೀ ತೋಂಟದಾರ್ಯ ಮಠದಲ್ಲಿ ನಡೆಯಲಿದೆ.

ಶ್ರೀ ಜಗದ್ಗುರು ಡಾ. ತೋಂಟದ ಸಿದ್ಧರಾಮ ಮಹಾಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಸಚಿವ ಹೆಚ್.ಕೆ. ಪಾಟೀಲ್ ಅಧ್ಯಕ್ಷತೆ ವಹಿಸುವರು. ಸಭಾಪತಿ ಬಸವರಾಜ ಹೊರಟ್ಟಿ, ಶ್ರೀ ನಿಜಗುಣ ಪ್ರಭು ತೋಂಟದಾರ್ಯ ಸ್ವಾಮೀಜಿ ಸೇರಿದಂತೆ, ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

## ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ಫೆ.19 - ಪ್ರಸಕ್ತ ಸಾಲಿನ ಹಿಂದುಳಿದ ವರ್ಗಗಳ ಅಲೆಮಾರಿ ಮತ್ತು ಅರೆ ಅಲೆಮಾರಿ ಪ್ರವರ್ಗ-1 ವಿದ್ಯಾರ್ಥಿಗಳ ಮೆಟ್ರಿಕ್ ನಂತರದ ಶುಲ್ಕ ವಿನಾಯಿತಿ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ದಿನಾಂಕವನ್ನು ಮಾರ್ಚ್ 10 ರವರೆಗೆ ವಿಸ್ತರಿಸಲಾಗಿದೆ. ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವಂತೆ ಹಿಂದುಳಿದ ವರ್ಗಗಳ ಜಿಲ್ಲಾ ಕಲ್ಯಾಣಾಧಿಕಾರಿ ತಿಳಿಸಿದ್ದಾರೆ .

# ಅನ್ನಭಾಗ್ಯ: ಹಣಕ್ಕೆ ಬದಲು ಅಕ್ಕಿ

**(1ನೇ ಪುಟದಿಂದ)** ಆಡಳಿತಾವಧಿಯಲ್ಲಿ ಅನ್ನಭಾಗ್ಯ ಯೋಜನೆಗೆ ಪ್ರಾಮುಖ್ಯತೆ ನೀಡುವ ಮೂಲಕ ಕರ್ನಾಟಕವನ್ನು ಹಸಿವು ಮುಕ್ತ ರಾಜ್ಯವನ್ನಾಗಿಸಿರುವುದು ಹೆಮ್ಮೆಯ ವಿಷಯ ಎಂದರು.

ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರಾಗಿ, ಜೋಳ ಮತ್ತು ಭತ್ತ ಖರೀದಿಗೆ 366 ಕೇಂದ್ರ ತೆರೆ ಯಲಾಗಿದೆ, ಕಳೆದ ಡಿಸೆಂಬರ್ 1 ರಿಂದಲೇ ನೋಂದಣಿ ಮಾಡಿಕೊಳ್ಳಲು ರೈತರಿಗೆ ಅವಕಾಶ ಕಲ್ಪಿಸಲಾಗಿದ್ದು, ಈ ವರ್ಷದ ಮಾರ್ಚ್ ಅಂತ್ಯ ದವರೆಗೆ ನೋಂದಣಿ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.

ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿ ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ಖರೀದಿ ಏಜೆನ್ಸಿಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಕೇಂದ್ರ ಸರ್ಕಾರ ರಾಗಿಗೆ ಕನಿಷ್ಠ ಬೆಂಬಲ ಬೆಲೆಯನ್ನು 4,290 ರೂ.ಗೆ ನಿಗದಿಪಡಿಸಿದೆ, ಖರೀದಿ ಗುರಿ 4.40 ಲಕ್ಷ ಮೆಟ್ರಿಕ್ ಟನ್‌ಗಳಾಗಿದೆ, 3.6 ಲಕ್ಷ ಮೆಟ್ರಿಕ್ ಟನ್ ರಾಗಿ ನೀಡಲು 2,54,528 ರೈತರು ನೋಂದಾಯಿಸಿಕೊಂಡಿದ್ದು, ಪ್ರತಿ 10 ರೈತರಿಂದ ಗರಿಷ್ಠ 20 ಕ್ವಿಂಟಾಲ್ ಖರೀದಿಸಲು ಕ್ರಮ ವಹಿಸಲಾಗಿದೆ.

ಸಾಮಾನ್ಯ ಭತ್ತಕ್ಕೆ ಕನಿಷ್ಠ ಬೆಂಬಲ ಬೆಲೆ 2,300 ರೂ., "ಎ'' ಗ್ರೇಡ್ ಭತ್ತಕ್ಕೆ 2,320 ರೂ. ನಿಗದಿಯಾಗಿದ್ದು, ಖರೀದಿ ಗುರಿ 7.5 ಲಕ್ಷ ಮೆಟ್ರಿಕ್ ಟನ್‌ಗಳಾಗಿದೆ, ಭತ್ತ ನೀಡಲು 3,388 ರೈತರು ನೋಂದಾಯಿಸಿಕೊಂಡಿದ್ದು, ಪ್ರತಿ ರೈತರಿಂದ 50 ಕ್ವಿಂಟಾಲ್ ಖರೀದಿಗೆ ಕ್ರಮ ವಹಿಸಲಾಗಿದೆ.

ಹೈಬ್ರೀಡ್ ಜೋಳಕ್ಕೆ ಕನಿಷ್ಠ ಬೆಂಬಲ ಬೆಲೆ 3,371 ರೂ., ಮಾಲ್ದಂಡಿ ಜೋಳಕ್ಕೆ 3,421 ರೂ., ಖರೀದಿ ಗುರಿ ಒಂದು ಲಕ್ಷ ಮೆಟ್ರಿಕ್ ಟನ್ ನಿಗದಿಯಾಗಿದ್ದು, 17,527 ರೈತರು ನೋಂದಾಯಿಸಿಕೊಂಡಿದ್ದು, ಪ್ರತಿ ರೈತರಿಂದ 150 ಕ್ವಿಂಟಾಲ್‌ನಂತೆ ಖರೀದಿಸಲಾಗುವುದು.

ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆಯಲ್ಲಿ ಲೋಪ ಕಂಡು ಬಂದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದರು.

ಆಹಾರ ಇಲಾಖೆ ಕಛೇರಿಗಳ ಸಂಕೀರ್ಣ ಆಹಾರ ಸೌಧವನ್ನು 50 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ, ಅನರ್ಹ ಪಡಿತರ ಚೀಟಿ ಪತ್ತೆ ಹಚ್ಚಿ ರದ್ದುಗೊಳಿಸಲಾಗುತ್ತಿದೆ ಎಂದರು.

# ಗ್ರಾಮೀಣ ಅಂಚೆ ಸೇವಕರ ನೇಮಕಾತಿಗೆ ಅರ್ಜಿ

ದಾವಣಗೆರೆ, ಫೆ.19- ಅಂಚೆ ಇಲಾಖೆಯಲ್ಲಿ ಗ್ರಾಮೀಣ ಅಂಚೆ ಸೇವಕರ ನೇಮಕಾತಿ ಸಂಬಂಧ ಇಲಾಖೆಯಲ್ಲಿ ಖಾಲಿ ಇರುವ ಶಾಖಾ ಅಂಚೆ ಪಾಲಕ, ಸಹಾಯಕ ಶಾಖಾ ಅಂಚೆ ಪಾಲಕ ಮತ್ತು ಡಾಕ್ ಸೇವಕ್ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ವೆಬ್‌ಸೈಟ್ www.indiapostgdsonline.gov.in ನಲ್ಲಿ ಮಾರ್ಚ್ 3 ರೊಳಗಾಗಿ ಅರ್ಜಿ ಸಲ್ಲಿಸಬೇಕು. ಎಲ್ಲಾ ಹುದ್ದೆಗಳಿಗೆ 10ನೇ ತರಗತಿ ತೇರ್ಗಡೆ ಕಡ್ಡಾಯ. ಇಂಗ್ಲಿಷ್ ಮತ್ತು ಗಣಿತದಲ್ಲಿ ಉತ್ತೀರ್ಣ ಅಂಕಗಳೊಂದಿಗೆ 10ನೇ ತರಗತಿಯಲ್ಲಿ, ಕನ್ನಡವನ್ನು ಒಂದು ಭಾಷೆಯಾಗಿ ಅಧ್ಯಯನ ಮಾಡಿರಬೇಕು.

ಹೆಚ್ಚಿನ ಮಾಹಿಗಾಗಿ ಸಮೀ ಪದ ಯಾವುದೇ ಅಂಚೆ ಕಚೇರಿಯನ್ನು ಅಥವಾ ಮೇಲೆ ತಿಳಿಸಿದ ವೆಬ್‌ಸೈಟ್ ಲಿಂಕ್‌ನ್ನು ಸಂಪರ್ಕಿಸಲು ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

# ಕ್ಯಾಲ್ಸಿಯಂ ತೆರವುಗೊಳಿಸುವ ನವೀನ ಚಿಕಿತ್ಸೆ



ರಾಣೇಬೆನ್ನೂರು, ಫೆ. 19 - ಕ್ಯಾಲ್ಸಿಯಂ ಶೇಖರಣೆಗೊಂಡು ರಕ್ತ ಸಂಚಲನೆಗೆ ತಡೆ ಉಂಟಾಗಿ ಹೃದಯ ಬೇನೆಯಿಂದ ಬಳಲುತ್ತಿದ್ದ ರಾಣೇಬೆನ್ನೂರಿನ ಈರ್ವರು ರೋಗಿಗಳಿಗೆ ಕ್ಲಿಷ್ಟಕರವಾದ ಆರ್ಬಿಟಲ್ ಅಥೆರೆಕ್ಟಮಿ ಶಸ್ತ್ರಚಿಕಿತ್ಸೆ ಮಾಡಿ ಅವರನ್ನು ಗುಣಪಡಿಸಿದ್ದು ದಾವಣಗೆರೆ ಎಸ್.ಎಸ್. ನಾರಾಯಣ ಹೆಲ್ತ್ ಆಸ್ಪತ್ರೆಯ ಡಾ. ಆರ್.ಎಸ್. ಧನಂಜಯ ಅವರ ತಂಡದ ಕಾರ್ಯ ಶ್ಲಾಘನೀಯವಾದುದು ಎಂದು ಹಿರಿಯ ಹೃದಯ ತಜ್ಞ ಡಾ. ಮಲ್ಲೇಶ ಪಿ. ಹೇಳಿದರು.

ಅವರು ನಗರದ ಪ್ರವಾಸಿ ಮಂದಿರದಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ, ಮಧ್ಯಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಯಶಸ್ವು ಕಂಡ ಈ ಶಸ್ತ್ರಚಿಕಿತ್ಸೆ ಡಾ.ಧನಂಜಯ ಅವರ ವಿಶೇಷ ಸಾಧನೆ ಎಂದು ಬಣ್ಣಿಸಿದರು.

ಆಂಜಿಯೋಪ್ಲಾಸ್ಟ್ ಮಾಡಲು ಅಪಧಮನಿಗಳಲ್ಲಿ ಶೇಖರಣೆಗೊಂಡ ಕ್ಯಾಲ್ಸಿಯಂ ಅನ್ನು ಸ್ವಚ್ಛಗೊಳಿಸುವ ತಂತ್ರಜ್ಞಾನದ ಸಾಧನ ವಜ್ರದ ತುದಿ ಹೊಂದಿದ್ದು ಇದು ಪ್ರತಿ ಸೆಕೆಂಡಿಗೆ 80 ಸಾವಿರದಿಂದ 1 ಲಕ್ಷ 20 ಸಾವಿರದಷ್ಟು ಸುತ್ತು ತಿರುಗುವ ಮೂಲಕ ಸ್ಟಂಟ್ ಹಾಕಲು ಇರುವ ಅಡೆತಡೆಗಳನ್ನು ದೂರವಾಗಿಸುತ್ತದೆ. ನಂತರ ಸ್ಟಂಟ್ ಅಳವಡಿಸಿ ರೋಗಿಗಳನ್ನು ಗುಣಪಡಿಸಲಾಗುತ್ತದೆ. ಇದು ಅತ್ಯಂತ ನವೀನವಾದ ತಂತ್ರಜ್ಞಾನದ ಶಸ್ತ್ರಚಿಕಿತ್ಸೆಯಾಗಿದೆ.

ವ್ಯಾಯಾಮ ರಹಿತ ಬದುಕು, ಅಪೌಷ್ಟಿಕ ಆಹಾರ ಸೇವನೆ, ಒತ್ತಡದ ಬದುಕು, ಜೊತೆಗೆ ಮದ್ಯಪಾನ, ತಂಬಾಕು ಸೇವನೆ ಮುಂತಾದ ಜೀವನ ಪದ್ದತಿ ಇಂದಿನ ಯುವಕರ ಬದುಕು ಅತಂತ್ರಗೊಂಡಿದೆ.

35-40 ವಯಸ್ಸಿನ ಯುವಕರು ಹೃದಯ ಬೇನೆಗೆ ತುತ್ತಾಗಿ ಜೀವಕಳೆದು ಕೊಳ್ಳುತ್ತಿದ್ದಾರೆ ಎಂದು ಡಾ. ಮಲ್ಲೇಶ್ ಪತ್ರಕರ್ತರ ಪ್ರಶ್ನೆಗೆ ಉತ್ತರಿಸಿದರು.


**18ನೇ ವರ್ಷದ ಸವಿನೆನಪು**



**ದಿ॥ ಶ್ರೀ ಜಿ. ಬಸಪ್ಪ**

ಮಾಲೀಕರು : ಜಿ. ಬಸಪ್ಪ ಅಂಡ್ ಸನ್, ಪಾತ್ರೆ ವ್ಯಾಪಾರಿಗಳು,

**ಜಿ. ಬಸಪ್ಪ ಅಂಡ್ ಸನ್,** # 290/2,

ಶಾಂತಲಾ ವೆಡ್ಡಿಂಗ್ ಮಾಲ್ ಎದುರು, ಚಾಮರಾಜಪೇಟೆ, ದಾವಣಗೆರೆ. ಮೊ: 94485 16866

ನೀವು ನಮ್ಮನ್ನಗಲಿ ಇಂದಿಗೆ ಹದಿನೆಂಟು ವರ್ಷಗಳಾದವು.

ಸದಾ ನಿಮ್ಮ ಸ್ಮರಣೆಯಲ್ಲಿ ಮುನ್ನಡೆದು ನಿಮ್ಮ ಆತ್ಮಕ್ಕೆ ಚಿರಶಾಂತಿ ಬಯಸುವ,

ಪತ್ನಿ : ಶ್ರೀಮತಿ ಪ್ರೇಮಮ್ಮ ಜಿ. ಬಸಪ್ಪ

ಬಿ. ನೇತ್ರಾವತಿ, ಮೊಮ್ಮಗ : ಶಶಾಂಕ್,

ಬಿ. ಲಿಂಗರಾಜ್ ರೇಖಾ ಮತ್ತು ಮೊಮ್ಮಗ : ಝೇಂಕಾರ್

ಬಿ. ವೇದಾವತಿ ರುದ್ರಮುನಿ ಮತ್ತು ಮೊಮ್ಮಗಳು : ಯಶ್ಮಿತಾ


# ವಾರ್ಡ್‌ಗಳ ಅಭಿವೃದ್ಧಿಗೆ ಅನುದಾನ ನೀಡುವಂತೆ ಸದಸ್ಯರ ಆಗ್ರಹ

## ಹರಪನಹಳ್ಳಿಯಲ್ಲಿ ಪುರಸಭೆ ಸಾಮಾನ್ಯ ಸಭೆ



ಹರಪನಹಳ್ಳಿ, ಫೆ. 19 - ಪಟ್ಟಣದ ವಿವಿಧ ವಾರ್ಡ್‌ಗಳ ಅಭಿವೃದ್ಧಿಗೆ ಅನುದಾನ ನೀಡುವಂತೆ ಸದಸ್ಯ ಜಾಕಿರ್ ಒತ್ತಾಯಿಸಿದರು.

ಪಟ್ಟಣದ ಪುರಸಭೆಯ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಪುರಸಭೆಯಲ್ಲಿ ನಮಗೆ ಕಡಿಮೆ ಅವಧಿ ಇದ್ದು ವಾರ್ಡಗಳ ಅಭಿವೃದ್ಧಿಗೆ ಅನುದಾನ ನೀಡಿ ಎಂದು ಮನವಿ ಮಾಡಿದರು.

ಶಾಸಕರಾದ ಶ್ರೀಮತಿ ಎಂ.ಪಿ. ಲತಾ ಮಲ್ಲಿಕಾರ್ಜುನ ಮಾತನಾಡಿ, ತಾಲ್ಲೂಕಿನ ಎಲ್ಲಾ ವಾರ್ಡುಗಳಿಗೂ ಅನುದಾನ ಒದಗಿಸುತ್ತಿದ್ದೇವೆ. ಪಟ್ಟಣದ ಅಭಿವೃದ್ಧಿ ಪಡಿಸಲು ಸಾಧ್ಯವಾದಷ್ಟು ಅನುದಾನ ಒದಗಿಸಲು ಪ್ರಯತ್ನಿಸುವೆ ಎಂದು ತಿಳಿಸಿದರು.

ಕಳೆದ 25 ವರ್ಷಗಳಿಂದಲೂ ಪಟ್ಟಣದ ಮಾಸ್ಟರ್ ಪ್ಲಾನ್ ಮಾದರಿ ಇನ್ನೂ ರೆಡಿಯಾಗಿಲ್ಲ ಇದಕ್ಕಾಗಿ ಮೀನಾ-ಮೇಷ ಎಣಿಸುತ್ತಿರುವುದು ಸರಿಯಾದ ಕ್ರಮವಲ್ಲ. ಒಂದು ತಿಂಗಳೊಳಗೆ ಈ ಸಮಸ್ಯೆ ಬಗೆಹರಿಸದಿದ್ದರೆ ಪುರಸಭೆಯ ಮುಂದೆ ಧರಣಿ ನಡೆಸುತ್ತೇವೆ ಎಂದು ಪುರಸಭೆ ಮಾಜಿ ಅಧ್ಯಕ್ಷ ಹೆಚ್.ಎಂ. ಅಶೋಕ್ ಆಕ್ರೋಶ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಪುರಸಭೆ ಮುಖ್ಯ ಅಧಿಕಾರಿ ಶಿವಕುಮಾರ್, ಪುರಸಭೆಯಿಂದ ಯಾವುದೇ ವಿಳಂಬ ನೀತಿ ಅನುಸರಿಸಿಲ್ಲ. ನಾವು ಪ್ರಾಧಿಕಾರಕ್ಕೆ ಬೇಕಾದ ಎಲ್ಲಾ ಮಾಹಿತಿಗಳನ್ನು ಒದಗಿಸಿರುತ್ತೇವೆ. ಇನ್ನು ಹೆಚ್ಚಿನ ಕ್ರಮ ಅವರಿಂದಲೇ ಆಗಬೇಕು. ಇದರಲ್ಲಿ ನಮ್ಮಿಂದ ಯಾವುದೇ ತಪ್ಪು ಇರುವುದಿಲ್ಲ ಎಂದರು.

ಪಟ್ಟಣದ ಅಭಿವೃದ್ಧಿಗೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಯೋಜನೆ ಅನುದಾನದಡಿ ಹಣ ನೀಡಿ ಎಂದು ಪುರಸಭೆ ಸದಸ್ಯ ಹರಾಳು ಅಶೋಕ ಕೇಳಿದ ಪ್ರಶ್ನೆಗೆ, ಶಾಸಕರು ಉತ್ತರಿಸಿ ಪರಿಸ್ಥಿತಿಗೆ ಅನುಗುಣವಾಗಿ ಅನುದಾನ ಬಿಡುಗಡೆ ಮಾಡಿಸಲು ಪ್ರಯತ್ನಿಸುವುದಾಗಿ ತಿಳಿಸಿದರು.

ಪುರಸಭೆಯಲ್ಲಿ ಯಾವುದೇ ಪಕ್ಷದ ಸದಸ್ಯರು ಇರಲಿ, ಎಲ್ಲರಿಗೂ ಅಭಿವೃದ್ಧಿಗಾಗಿ ನಾನು ಸಹಕರಿಸುವೆ ಎಂದು ಶಾಸಕರು ತಿಳಿಸಿದರು. ಬೆನ್ನೂರು ಲೇಔಟ್ ನಲ್ಲಿ ಅತ್ಯಂತ ಕಳಪೆ ಕಾಮಗಾರಿ ರಸ್ತೆ ನಿರ್ಮಿಸಲಾಗಿದೆ.

ಮೇಗಳಪೇಟೆ ವೀರಶೈವ ಸಮಾಜದ ರುದ್ರಭೂಮಿ ನಿರ್ಮಾಣಕ್ಕಾಗಿ ಅರ್ಜಿ ಸಲ್ಲಿಸಲಾಗಿದೆ. ಆದರೆ ಅದು ಸಾರ್ವಜನಿಕವಾಗಿ ಮಾತ್ರ ನೀಡಲು ಸಾಧ್ಯವೆಂದು ಸದಸ್ಯರಿಗೆ ಉತ್ತರಿಸಿದರು.

ಪಟ್ಟಣದಲ್ಲಿ 16 ರುದ್ರಭೂಮಿಗಳು ಇದ್ದು ಅದರಲ್ಲಿ ಒಂದು ಕೂಡಾ ಸ್ವಚ್ಛತೆಯಿಂದಿಲ್ಲ ಎಂದು ಸದಸ್ಯರು ಬೇಸರ ವ್ಯಕ್ತಪಡಿಸಿದರು. ಕೂಡಲೇ ಅದನ್ನು ಸ್ವಚ್ಛಗೊಳಿಸಲು ಸೂಚಿಸಿ, ಸ್ಮಶಾನ ನಿರ್ಮಾಣದಲ್ಲಿ ಜಿಲ್ಲೆಯಲ್ಲಿಯೇ ನಮ್ಮ ತಾಲ್ಲೂಕು ಪ್ರಥಮ ಸ್ಥಾನ ಹೊಂದಿದೆ ಎಂದು ಶಾಸಕರು ತಿಳಿಸಿದರು.

ಬೀದಿ ದೀಪ, ಕುಡಿಯುವ ನೀರು, ಉದ್ಯಾನವನಗಳ ಅಭಿವೃದ್ಧಿ, ನಗರ ಸೌಂದರ್ಯೀಕರಣ ಮತ್ತು ಸರ್ಕಲ್‌ಗಳಿಗೆ ಮಹಾನ್ ವ್ಯಕ್ತಿಗಳ ನಾಮಕರಣ ಮಾಡಲು ಚರ್ಚಿಸಿ ಕುಡಿಯುವ ನೀರು ಬೀದಿ ದೀಪ ಇವುಗಳಿಗೆ ಮೊದಲ ಆದ್ಯತೆ ನೀಡಬೇಕೆಂದು ಸರ್ವ ಸದಸ್ಯರು ಒಪ್ಪಿಗೆ ಸೂಚಿಸಿದರು.

ಸಭೆಯಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷ ವೆಂಕಟೇಶ್, ಪುರಸಭೆ ಅಧ್ಯಕ್ಷೆ ಫಾತಿಮಾ ಶೇಕ್ಷಾವಲಿ, ಉಪಾಧ್ಯಕ್ಷ ಹೆಚ್ ಕೊಟ್ರೇಶ್, ಸದಸ್ಯರಾದ ಎಂ.ವಿ.ಅಂಜಿನಪ್ಪ, ಗೊಂಗಡಿ ನಾಗರಾಜ್, ಗಣೇಶ್, ಕಿರಣ್ ಕುಮಾರ್ ಶಾನುಭೋಗ್, ಮಂಜುನಾಥ್ ಇಜಂತ್ಕರ್ ಸೇರಿದಂತೆ ಅನೇಕರು ಇದ್ದರು

# ಸರ್ವಜ್ಞ ಎಲ್ಲರೊಳಗಿನ ಸಹೃದಯಿ ಕವಿ



ಇಂದು ಸಂತ ಕವಿ ಸರ್ವಜ್ಞ ಜಯಂತಿ

ಕನ್ನಡ ಸಾಹಿತ್ಯದಲ್ಲಿ ಜನಪದ ವರಕವಿ, ದರ್ಶನಿಕ, ತತ್ವಜ್ಞಾನಿ, ತ್ರಿಪದಿಯ ಬ್ರಹ್ಮ, 'ಆಡು ಮುಟ್ಟದ ಸೊಪ್ಪಿಲ್ಲ ಸರ್ವಜ್ಞ ಹೇಳದ ಮಾತಿಲ್ಲ' ಎಂಬ ಉಪಮಾನಗಳಿಗೆ ಕಾರಣರಾದ ಸರ್ವಜ್ಞ ಒಬ್ಬ ನಾಡು ಕಂಡ ಅತ್ಯದ್ಭುತ ಕವಿ. ಅವರ ಮೂರು ಸಾಲಿನ ಪದ್ಯಗಳು ಬದುಕಿನ ಅಗಾಧವಾದ ಅರ್ಥವನ್ನು ಒಳಗೊಂಡಿರುವುದು ವಿಶೇಷ

'ತ್ರಿಪದಿ' ಎಂಬ ವಿಶಿಷ್ಟ ಪ್ರಕಾರದ ಸಾಹಿತ್ಯ ರಚನೆಗೆ ಕಾರಣರಾದ ಸರ್ವಜ್ಞ ಜನಿಸಿದ್ದು ಇಂದಿನ ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನ ಅಬ್ಬಲೂರು ಎಂಬ ಹಳ್ಳಿ. ಅವರ ಹೆತ್ತಮ್ಮ ಕುಂಬಾರ ಮಾಳೆ. ಅವರ ಮೂಲ ಹೆಸರು ಪುಷ್ಪದತ್ತ. ಸರ್ವಜ್ಞನವರ ಬಗ್ಗೆ ಹೆಚ್ಚಿನ ವೈಯಕ್ತಿಕ ಮಾಹಿತಿ ನಮಗೆ ಲಭ್ಯವಿರದಿದ್ದರೂ ಅವರ ತ್ರಿಪದಿಗಳು ಅವರ ವ್ಯಕ್ತಿತ್ವದ ಪ್ರತೀಕವಾಗಿ ನಮಗೆ ಲಭ್ಯವಿರುವುದು ನಮ್ಮ ಭಾಗ್ಯವೇ ಸರಿ.

**ಸರ್ವಜ್ಞ ತ್ರಿಪದಿಗಳ ಸಾರ**

ಸರ್ವಜ್ಞ ತ್ರಿಪದಿಗಳು ಜಾತಿ ಮತ್ತು ಧರ್ಮ ಸಂಘರ್ಷದ ವಿರುದ್ಧ ಕಿಡಿ ಕಾರಿದ, ಮೂಢನಂಬಿಕೆ, ಶೋಷಣೆಗಳನ್ನು ಕಟುವಾಗಿ ಟೀಕಿಸಿದ, ವಿಶ್ವ ಮಾನವತೆಯ ಮಾನವೀಯ ಮೌಲ್ಯಗಳನ್ನು ಪ್ರತಿಪಾದಿಸಿದ ಸರ್ವಜ್ಞನ ತ್ರಿಪದಿಗಳು ಸಮಾಜಕ್ಕೆ ಸಾರ್ವಕಾಲಿಕ ದಿವ್ಯ ಔಷಧಿಗಳಾಗಿವೆ.

**ಸರ್ವಜ್ಞನೆಂಬುವನು ಗರ್ವದಿಂದಾದವನೆ**
**ಸರ್ವರೊಳೊಂದೊಂದು ನುಡಿಗಲಿತುವಿದ್ಯದ**
**ಪರ್ವತವೇ ಆದ ಸರ್ವಜ್ಞ**

'ಸರ್ವಜ್ಞ' ಎಂದರೆ 'ನಾನು ಎಲ್ಲಾ ತಿಳಿದವನು' ಎಂಬ ಅರ್ಥವಲ್ಲ, 'ಸರ್ವರೊಳು ಒಂದೊಂದು ನುಡಿ ಕಲಿತವನು' ಎಂಬ ಅರ್ಥವು ಕಲಿಕೆಗಿರುವ ಸಾಮಾಜಿಕ, ಜಾನಪದೀಯ ಆಯಾಮವನ್ನು ಎತ್ತಿ ತೋರಿಸುತ್ತದೆ. ವಿದ್ಯೆಯ ಪರ್ವತವಾಗುವುದು ನಾವೇನೋ ಅಪೂರ್ವವಾದದ್ದನ್ನು ಕಲಿತು ಜ್ಞಾನ ಸಿದ್ಧಿಸಿಕೊಳ್ಳುವುದರಲ್ಲಿಲ್ಲ, ಎಲ್ಲರೊಳು ಒಂದಾಗಿ, ಎಲ್ಲರನ್ನು ಗುರುವಾಗಿ ಕಂಡು, ಎಲ್ಲರಲ್ಲೂ ಇರುವ 'ವಿದ್ಯೆ'ಯನ್ನು ಗ್ರಹಿಸಿ, ಸಂಗ್ರಹಿಸಿ ನಮ್ಮದಾಗಿಸಿಕೊಂಡಾಗಲೇ ಪುಸ್ತಕಗಳ ಓದು, ಶಾಲಾ – ಕಾಲೇಜು, ವಿಶ್ವವಿದ್ಯಾಲಯಗಳ ಶಿಕ್ಷಣಕ್ಕಿಂತ ಭಿನ್ನವಾದ ಸಹಜ, ಸಾಮುದಾಯಿಕ ಕಲಿಕೆ, ತಿಳಿವಳಿಕೆಗೆ ಮಹತ್ವ ನೀಡುವ ಯಾವುದೇ ವ್ಯಕ್ತಿಯು ಅಹಂಕಾರಕ್ಕೆ ದುರ್ಲಭವಾದ ಸ್ವಚ್ಛ ಜ್ಞಾನವನ್ನು ಪಡೆಯುವನೆಂಬ ಮಾರ್ಮಿಕವಾದ ಅರಿವು ಈ ಎರಡೇ ಸಾಲುಗಳಲ್ಲಿರುವುದು ನಿಜಕ್ಕೂ ಸೋಜಿಗವೇ ಅಲ್ಲವೇ?

**ಮೂರ್ಖಂಗೆ ಬುದ್ಧಿಯನು ನೂರ್ಕಾಲ ಪೇಳಿದರೆ**
**ಗೋರ್ಕಲ್ಲ ಮೇಲೆ ಮಳೆ ಸುರಿದರಾ ಕಲ್ಲು**
**ನೀರ್ಕೊಂಬುದುಂಟೆ ಸರ್ವಜ್ಞ**

ಹಿರಿಯರಂತೂ ಮಕ್ಕಳನ್ನು ಕುರಿತು ಈ ಮಾತನ್ನು ಹೇಳುವುದು ಎಲ್ಲರ ಮನೆಯಲ್ಲಿ ಸಾಮಾನ್ಯವೇ. ಏನು ಮಾಡುವುದು? ಅನುಭವಕ್ಕೆ ಬರದ ಹೊರತು ಯಾವ ಬುದ್ಧಿಮಾತೂ ಪ್ರಭಾವ ಬೀರುವುದಿಲ್ಲವಲ್ಲ? ನಾವೇ ಹೋಗಿ, ಎಡವಿಬಿದ್ದು ಪೆಟ್ಟಾದಾಗಲೇ ಜಾಗರೂಕತೆ ಕಲಿಯುವುದರಲ್ಲಿ ತಪ್ಪೇನಿದೆ? ಅನುಭವ ಮಾತ್ರವೇ ಮನುಷ್ಯನನ್ನು ಕಲ್ಲಿನಂತಹ ಜಡತ್ವದಿಂದ ಮೇಲೆತ್ತಬಹುದು. ಆಗ ಮಾತ್ರವೇ ಬದುಕಿನ 'ನೀರನ್ನು' ಹೀರಬಲ್ಲಂತಹ ಸಾಮರ್ಥ್ಯ ಉಂಟಾಗುವುದಲ್ಲದೆ ಬರೀ ಮಾತಿನಿಂದ ಯಾವ ಕಲ್ಲಿಗೆ ತಾನೇ ಶಾಪ ವಿಮೋಚನೆಯಾದೀತು?

ಹೀಗೆ ಸರ್ವಜ್ಞ ರವರ ತ್ರಿಪದಿಗಳ ಸಾಲು ಮೂರೇ ಆದರೂ ಅವುಗಳು ನೀಡುವ ಅರ್ಥ ಸಾವಿರಾರು ಪಟ್ಟು ಇದೆ .

**- ಬಸವಾರಾಜ ಕರುವಿನ,** ಬಸವನಾಳು

# ಸೂಕ್ಷ್ಮ ರಕ್ಷಣಾ ಮಾಹಿತಿಗಳನ್ನು ಸೋರಿಕೆ ಮಾಡಿದ ಮೂವರ ಬಂಧನ

ನವದೆಹಲಿ, ಫೆ. 19 - ಸೂಕ್ಷ್ಮ ಮಾಹಿತಿಗಳನ್ನು ಪಾಕಿಸ್ತಾನದ ಗುಪ್ತಚರರಿಗೆ ನೀಡಿದ ಆರೋಪದ ಮೇಲೆ ಮೂವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯಾದ ಎನ್‌ಐಎ ಬಂಧಿಸಿದೆ.

ಕಾರವಾರ ನೌಕಾ ನೆಲೆ ಹಾಗೂ ಕೊಚ್ಚಿ ನೌಕಾ ನೆಲೆಯ ರಕ್ಷಣಾ ಮಾಹಿತಿಗಳನ್ನು ಪಾಕಿಸ್ತಾನದ ಗುಪ್ತಚರರಿಗೆ ನೀಡಿದ ಆರೋಪದ ಮೇಲೆ ಇವರನ್ನು ಬಂಧಿಸಲಾಗಿದೆ ಎಂದು ಎನ್‌ಐಎ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಲಕ್ಷ್ಮಣ್ ಟಂಡೆಲ್ ಹಾಗೂ ಅಕ್ಷಯ್ ರವಿ ನಾಯಕ್ ಹಾಗೂ ಕೇರಳದ ಕೊಚ್ಚಿಯ ಪಿ.ಎ. ಅಭಿಲಾಶ್ ಬಂಧಿತರಾಗಿದ್ದಾರೆ.

ಇವರು ಸಾಮಾಜಿಕ ಮಾಧ್ಯಮಗಳ ಮೂಲಕ ಪಾಕಿಸ್ತಾನದ ಗುಪ್ತಚರರ ಸಂಪರ್ಕದಲ್ಲಿ ಇದ್ದುದನ್ನು ಪತ್ತೆ ಮಾಡಲಾಗಿತ್ತು. ನಂತರ ಸ್ಥಳೀಯ ಪೊಲೀಸರ ನೆರವಿನೊಂದಿಗೆ ಮೂವರನ್ನು ಬಂಧಿಸಲಾಗಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಮೂವರೂ ಸೇರಿದಂತೆ ಒಟ್ಟು ಎಂಟು ಜನರನ್ನು ಬಂಧಿಸಲಾಗಿದೆ.

# ಮಕ್ಕಳಿಗೆ ಕೈಗೆ ಬೈಕ್ ಚಲಾಯಿಸಲು ಕೊಟ್ಟ ಪಾಲಕರಿಗೆ 25 ಸಾವಿರ ದಂಡ



ದಾವಣಗೆರೆ, ಫೆ.19- ಅಪ್ರಾಪ್ತ ಬಾಲಕ ಬೈಕ್ ಚಲಾಯಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ನ್ಯಾಯಾಲಯವು ಬೈಕ್ ಮಾಲೀಕರಿಗೆ 25 ಸಾವಿರ ದಂಡ ವಿಧಿಸಿದೆ.

ನಗರದ ಗಡಿಯಾರ ಕಂಬದ ರಸ್ತೆಯಲ್ಲಿ ಫೆ.17ರಂದು ಉತ್ತರ ಸಂಚಾರ ಪೊಲೀಸ್ ಠಾಣೆಯ ಪಿಎಸ್‌ಐ ಜಯಶೀಲ ಮತ್ತು ಸಿಬ್ಬಂದಿ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಅಪ್ರಾಪ್ತ ಬಾಲಕ ಆಕ್ಟಿವ್ ಹೊಂಡಾ ಸ್ಕೂಟಿ ಚಲಾಯಿಸಿದ ಘಟನೆ ಬೆಳಕಿಗೆ ಬಂದಿದೆ.

ಮಮತಾ ಅವರಿಗೆ ಸೇರಿದ ಆಕ್ಟಿವ್ ಹೊಂಡಾ ಸ್ಕೂಟಿಯನ್ನು ವಶಕ್ಕೆ ಪಡೆದು ದಕ್ಷಿಣ ಸಂಚಾರ ಠಾಣೆಯಲ್ಲಿ ಇಂಡಿಯನ್ ಮೋಟಾರ್ ವೆಹಿಕಲ್ ಆಕ್ಟ್ ಅಡಿ ಪ್ರಕರಣ ದಾಖಲಿಸಿ, ಸ್ಕೂಟಿ ಮಾಲೀಕರ ವಿರುದ್ಧ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ಈ ಕುರಿತು ಪಿಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರು ದಂಡ ವಿಧಿಸಿ, ಅಪ್ರಾಪ್ತರ ಕೈಗೆ ವಾಹನ ಕೊಡದಂತೆ ಎಚ್ಚರಿಕೆ ನೀಡಿದ್ದಾರೆ.

# ಹಸ್ತಾಂತರ ಆದವರಲ್ಲಿ ಪಂಜಾಬಿನವರೇ ಹೆಚ್ಚು

**ಅಮೃತ್‌ಸರದಲ್ಲಿ ಅಮೆರಿಕ ವಿಮಾನ ಇಳಿಸಿದ್ದಕ್ಕೆ ಕೇಂದ್ರ ಮೂಲಗಳ ಸಮರ್ಥನೆ**

ನವದೆಹಲಿ, ಫೆ. 19 - ಅಕ್ರಮವಾಗಿ ವಲಸೆ ತೆರಳಿದ ಕಾರಣಕ್ಕಾಗಿ ಹಸ್ತಾಂತರಗೊಂಡ ಭಾರತೀಯರಲ್ಲಿ ಪಂಜಾಬ್‌ನವರ ಸಂಖ್ಯೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಅಕ್ರಮ ವಲಸಿಗರ ವಿಮಾನಗಳನ್ನು ಪಂಜಾಬ್‌ನ ಅಮೃತ್‌ಸರದಲ್ಲಿ ಇಳಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರದ ಮೂಲಗಳು ಸ್ಪಷ್ಟಪಡಿಸಿವೆ. ಅಮೆರಿಕದ ಸೈನಿಕ ವಿಮಾನಗಳಿಂದ 333 ಜನರನ್ನು ಹಸ್ತಾಂತರಿಸಲಾಗಿದೆ. ಇವರ ಪೈಕಿ 126 ಪಂಜಾಬ್‌ನವರಾಗಿದ್ದಾರೆ. ಹರಿಯಾಣದ 110 ಹಾಗೂ ಗುಜರಾತ್‌ನ 74 ಜನರಿದ್ದಾರೆ.

# ಹೊನ್ನಾಳಿ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷರಾಗಿ ಅರಬಗಟ್ಟೆ ರಮೇಶ



ಹೊನ್ನಾಳಿ, ಫೆ. 19- ತಾಲ್ಲೂಕು ಪಿಕಾರ್ಡ್ ಬ್ಯಾಂಕನ ಅಧ್ಯಕ್ಷರಾಗಿ ಅರಬಗಟ್ಟೆ ಕೆ.ಜಿ. ರಮೇಶ, ಉಪಾಧ್ಯಕ್ಷರಾಗಿ ಹೊಟ್ಯಾಪುರ ರುದ್ರಮ್ಮ ಅವರು ಅವಿರೋಧ ಆಯ್ಕೆಯಾಗಿರುವುದಾಗಿ ಚುನಾವಣಾಧಿಕಾರಿ ನವೀನ್ ಕುಮಾರ ತಿಳಿಸಿದ್ದಾರೆ.

ಬುಧವಾರ ನಡೆದ ನೂತನ ಅವಧಿಯ ಮೊದಲನೇ ಅಧ್ಯಕ್ಷ ಉಪಾ ಧ್ಯಕ್ಷರ ಆಯ್ಕೆ ಪ್ರಕ್ರಿಯೆ ಯಲ್ಲಿ ಅವರು ಆಯ್ಕೆಗೊಂಡರು.

ಪಿಕಾರ್ಡ್ ಬ್ಯಾಂಕ್ ನೂತನ ನಿರ್ದೇಶಕರಾದ ಹೊನ್ನಾಳಿ ಕೆ.ವಿ. ನಾಗರಾಜ, ರಾಘವೇಂದ್ರ, ಕುಂದೂರು ಎಂ.ಜಿ.ಆರ್. ಮಂಜುನಾಥ, ಕೆಂಚಿಕೊಪ್ಪ ಜಿ. ಶಂಕ್ರಪ್ಪ, ಚಿನ್ನಿಕಟ್ಟೆ ಕೆ.ಚೇತನ, ಚೀಲಾಪುರ ಸಿದ್ದಪ್ಪ, ಹರಳಹಳ್ಳಿ ಸುನೀಲ, ಗಂಟ್ಯಾಪುರ ಕುಬೇರನಾಯ್ಕ, ಮಹಿಳಾ ನಿರ್ದೇಶಕರಾಗಿ ಕೋಟೆ ಮಲ್ಲೂರು ಅನಸೂಯಮ್ಮ, ಚಿಕ್ಕೇರಳ್ಳಿ ಆಶಾ ಆಯ್ಕೆಯಾಗಿದ್ದಾರೆ.

# ವಿಜಯನಗರ ಸೊಸೈಟಿ ಅಧ್ಯಕ್ಷರಾಗಿ ರಮೇಶ್, ಉಪಾಧ್ಯಕ್ಷರಾಗಿ ಚಂದ್ರಪ್ಪ





ದಾವಣಗೆರೆ, ಫೆ. 19- ವಿಜಯನಗರ ಸೊಸೈಟಿ ಅಧ್ಯಕ್ಷರಾಗಿ ಬಿ.ರಮೇಶ್, ಉಪಾಧ್ಯಕ್ಷರಾಗಿ ಬಿ.ಚಂದ್ರಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಚುನಾವಣಾಧಿಕಾರಿಯಾಗಿದ್ದ ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿಯ ಅಧೀಕ್ಷಕರಾದ ಪಿ.ನಿವೇದಿತಾ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ನಿರ್ದೇಶಕರುಗಳಾದ ತಿಪ್ಪೇಸ್ವಾಮಿ ಬಿ., ಮಮತ ಎಂ., ಶಿವಾನಂದ ಜೆ.ಕೆ., ಪಂಪಣ್ಣ ದಬಡಿ, ರಮೇಶ್ ಬಿ. (ಪಿ.ಜೆ.), ಮಂಜುನಾಥ ಬಿ., ದುಗ್ಗೇಶ್ ಎಸ್., ವಾಣಿ ಹೆಚ್.ಸಿ., ವಂದನ ಹೆಚ್.ಎಂ., ಶೃತಿ ಎಂ. ವ್ಯವಸ್ಥಾಪಕ ದಯಾನಂದ ದೊಡ್ಡಮನಿ ಉಪಸ್ಥಿತರಿದ್ದರು.

# ಅಮೆರಿಕದ ಪ್ರತಿ ತೆರಿಗೆಯಿಂದ ಭಾರತದ ಮೇಲೆ ಸೀಮಿತ ಪರಿಣಾಮ : ಎಸ್ ಅಂಡ್ ಪಿ

ನವದೆಹಲಿ,ಫೆ. 19 - ಅಮೆರಿಕ ಪ್ರತಿ ತೆರಿಗೆ ಹೇರುವುದರಿಂದ ಭಾರತದ ಮೇಲೆ ಆಗುವ ಪರಿಣಾಮ ಸೀಮಿತ ಎಂದು ಎಸ್ ಅಂಡ್ ಪಿ ಗ್ಲೋಬಲ್ ರೇಟಿಂಗ್ಸ್ ಸಂಸ್ಥೆ ತಿಳಿಸಿದೆ.

ಭಾರತದ ಆರ್ಥಿಕತೆಯು ದೇಶಿಯ ಅವಲಂಬಿತವಾಗಿದೆ ಹಾಗೂ ರಫ್ತನ್ನು ಕಡಿಮೆ ಅವಲಂಬಿಸಿದೆ ಎಂದು ಏಷಿಯಾ ಪೆಸಿಫಿಕ್ ಎಸ್ ಅಂಡ್ ಪಿ ಗ್ಲೋಬಲ್ ನಿರ್ದೇಶಕ ಈಫ್ಯಾಮ್ ಫುವ ಹೇಳಿದ್ದಾರೆ

ಭಾರತ ಮುಂದಿನ ಎರಡು ವರ್ಷಗಳಲ್ಲಿ ಶೇಕಡ 6.7 - 6.8 ಬೆಳವಣಿಗೆ ಕಾಣಲಿದೆ. 2025 - 26ರ ಬಜೆಟ್ ಮುಂದಿನ ಕೆಲ ವರ್ಷಗಳಿಗೆ ಬೆಳವಣಿಗೆಗೆ ಉತ್ತೇಜನ ನೀಡಲಿದೆ ಎಂದವರು ಹೇಳಿದ್ದಾರೆ.

ಜಿಡಿಪಿ ಬೆಳವಣಿಗೆ ದರ ಈಗ ಸುಸ್ಥಿರ ಹಂತದಲ್ಲಿದೆ. ಆದಾಯ ತೆರಿಗೆ ವಿನಾಯಿತಿ ನೀಡುವುದರಿಂದ ಸರಕುಗಳ ಬೇಡಿಕೆ ಹೆಚ್ಚಾಗಲಿದೆ ಎಂದವರು ತಿಳಿಸಿದ್ದಾರೆ.

ಸರ್ಕಾರ ಹೂಡಿಕೆ ಆಧಾರಿತ ಬೆಳವಣಿಗೆ ಹಾಗೂ ಕೃಷಿ ವಲಯ ಸುಧಾರಣೆಗೆ ಗಮನಹರಿಸಿದೆ. ಕೊರೊನಾ ನಂತರದ ಮೂರು ವರ್ಷಗಳಲ್ಲಿ ಬೆಳವಣಿಗೆ ದರ ಸರಾಸರಿ ಶೇ. 8.3 ಆಗಿತ್ತು. ಈಗ ಬೆಳವಣಿಗೆ ದರ ಸುಸ್ಥಿರ ಹಂತಕ್ಕೆ ತಲುಪಿದೆ ಎಂದವರು ಹೇಳಿದ್ದಾರೆ.

ಭಾರತದ ಆರ್ಥಿಕತೆ ಭೌತಿಕವಾಗಿ ದೇಶಿಯ ಅವಲಂಬನೆ ಹೊಂದಿದೆ. ಹೀಗಾಗಿ ಅಮೆರಿಕ ಪ್ರತಿ ತೆರಿಗೆ ಹೇರುವುದರಿಂದ ಹೆಚ್ಚಿನ ಪರಿಣಾಮವಾಗುವುದಿಲ್ಲ. ಸೇವಾ ವಲಯದಿಂದ ಭಾರತದ ರಫ್ತು ಹೆಚ್ಚಾಗಿದೆ. ತೆರಿಗೆಗಳಿಂದ ಈ ವಲಯದ ಮೇಲೆ ಹೆಚ್ಚು ಪರಿಣಾಮವಾಗುವುದಿಲ್ಲ ಎಂದವರು ತಿಳಿಸಿದ್ದಾರೆ. ಭಾರತದಿಂದ ಆಭರಣ, ಔಷಧಗಳು, ಜವಳಿ ಹಾಗೂ ರಾಸಾಯನಿಕಗಳ ರಫ್ತು ಹೆಚ್ಚಾಗಿದೆ. ಭಾರತದಿಂದ ಜನರಿಕ್ ಔಷಧಗಳು ಹೆಚ್ಚಾಗಿ ರಫ್ತಾಗುತ್ತವೆ. ಔಷಧದ ಮೇಲೆ ಅಮೆರಿಕ ಹೆಚ್ಚು ತೆರಿಗೆ ಹೇರದೇ ಇರಬಹುದು ಎಂದು ಫುವ ಹೇಳಿದ್ದಾರೆ.

# ಉತ್ತರ ಪ್ರದೇಶದ 75 ಜೈಲುಗಳಲ್ಲಿ ಸಂಗಮದ ಪವಿತ್ರ ನೀರಿನಿಂದ ಸ್ನಾನದ ವ್ಯವಸ್ಥೆ

ಲಕ್ನೋ, ಫೆ. 19 - ಕುಂಭಮೇಳ ನಡೆಯುತ್ತಿರುವ ಪ್ರಯಾಗ್‌ರಾಜ್‌ನ ಸಂಗಮದಿಂದ ತರಿಸಲಾದ ಪವಿತ್ರ ನೀರಿನಿಂದ ಉತ್ತರ ಪ್ರದೇಶದಾದ್ಯಂತ ಇರುವ 75 ಜೈಲುಗಳಲ್ಲಿ ಸ್ನಾನಕ್ಕೆ ವ್ಯವಸ್ಥೆ ಮಾಡಲಾಗುವುದು.

ಫೆಬ್ರವರಿ 21ರ ಬೆಳಿಗ್ಗೆ 9.30ರ ಸಮಯದಲ್ಲಿ ಎಲ್ಲಾ ಜೈಲುಗಳಲ್ಲಿ ಸ್ನಾನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಉತ್ತರ ಪ್ರದೇಶ ಬಂಧೀಖಾನೆ ಸಚಿವ ದಾರಾ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ಏಳು ಕೇಂದ್ರ ಬಂಧೀಖಾನೆ ಸೇರಿದಂತೆ 75 ಜೈಲುಗಳಲ್ಲಿ 90 ಸಾವಿರಕ್ಕೂ ಹೆಚ್ಚು ಬಂಧಿತರಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಗಮದಿಂದ ಪವಿತ್ರ ಜಲವನ್ನು ಎಲ್ಲಾ ಜೈಲುಗಳಿಗೆ ರವಾನಿಸಲಾಗುವುದು.

ಅಲ್ಲಿ ಈ ನೀರನ್ನು ಸಾಮಾನ್ಯ ನೀರಿನ ಜೊತೆ ಬೆರೆಸಿ ಸ್ನಾನಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

# ಅಸಗೋಡು ಗ್ರಾ.ಪಂ.ಗೆ ರಾಧಮ್ಮ ಅಧ್ಯಕ್ಷೆ



ಜಗಳೂರು, ಫೆ.19- ತಾಲ್ಲೂಕಿನ ಅಸಗೋಡು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ರಾಧಮ್ಮ ಕುಬೇರಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎಸ್ ಟಿ ಮೀಸಲು ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ತುಪ್ಪದಹಳ್ಳಿ ಗ್ರಾಮದ ರಾಧಮ್ಮ ಕುಬೇರಪ್ಪ ಅವರು ಒಬ್ಬರೇ ನಾಮಪತ್ರ ಸಲ್ಲಿಸಿದ್ದು. ನಾಮಪತ್ರ ಊರ್ಜಿತವಾಗಿದ್ದು, ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿ ಕಾರಿಯಾಗಿದ್ದ ಲೋಕೋಪಯೋಗಿ ಇಲಾಖೆ ಎಇಇ ನಾಗರಾಜ್ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಮಾಜಿ ಅಧ್ಯಕ್ಷೆ ನಾಗಮ್ಮ ಚನ್ನಬಸಪ್ಪ, ಗ್ರಾ.ಪಂ.ಉಪಾಧ್ಯಕ್ಷೆ ಶಕುಂತಲಾ ತಿಮ್ಮೇಶ್, ಸದಸ್ಯರಾದ ಜೆ.ಎಂ. ರವಿಕುಮಾರ್, ವೀರಮ್ಮ, ಜಿ.ಎನ್. ಶಿಲ್ಪ, ರೇಣುಕಮ್ಮ, ನಾಗರಾಜ್, ಸರೋಜಮ್ಮ, ಲಲಿತಮ್ಮ, ಹೆಚ್.ಆರ್. ಬಸವರಾಜಪ್ಪ, ಬಸವರಾಜ್, ಎಂ. ಶಂಕರಪ್ಪ, ರೇಷ್ಮಾ, ನಸ್ರುಲ್ಲಾ, ಶಂಭುಲಿಂಗಪ್ಪ, ಮಂಜಮ್ಮ, ಪಿಡಿಓ ಮರುಳಸಿದ್ದಪ್ಪ ಇದ್ದರು.

# ಕುಂಭಮೇಳದಲ್ಲಿ ಜಲಮಾಲಿನ್ಯ

**(1ನೇ ಪುಟದಿಂದ)** ಶ್ರೀವಾಸ್ತವ, ಸದಸ್ಯರಾದ ನ್ಯಾಯಮೂರ್ತಿ ಸುಧೀರ್ ಅಗರ್ವಾಲ್ ಹಾಗೂ ಪರಿಣಿತ ಸದಸ್ಯ ಸೆಂಥಿಲ್ ವೇಲ್ ಅವರನ್ನು ಒಳಗೊಂಡ ಪೀಠ ಈ ಪ್ರಶ್ನೆ ಮುಂದಿಟ್ಟಿದೆ. ಪೀಠದ ಎದುರು ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಗರಿಮಾ ಪ್ರಸಾದ್, ಯಾವ ಸ್ಥಳಗಳಲ್ಲಿ ಮಾದರಿಗಳನ್ನು ಪಡೆಯಲಾಗಿದೆ ಎಂಬುದನ್ನು ಕೇಂದ್ರೀಯ ಮಂಡಳಿ ತಿಳಿಸಿಲ್ಲ ಎಂದರು.

ಉತ್ತರ ಪ್ರದೇಶ ಮಂಡಳಿಯು ವರದಿಗೆ ಆಕ್ಷೇಪಿಸುತ್ತಿದೆಯೇ? ಇಲ್ಲವೇ ಪ್ರಶ್ನಿಸುತ್ತಿದೆಯೇ? ಯಾವ ಸ್ಥಳಗಳಲ್ಲಿ ಮಾದರಿ ಪಡೆಯಲಾಗಿದೆ ಎಂಬುದನ್ನು ತಿಳಿಸುವ ಶಾಸನಾತ್ಮಕ ಅಗತ್ಯ ಇಲ್ಲ ಎಂದು ಪೀಠ ಹೇಳಿತು. ಮಾದರಿಗಳನ್ನು ಎಲ್ಲಿ ಪಡೆಯಲಾಗಿದೆ ಎಂಬುದು ಮುಖ್ಯವಲ್ಲ. ನದಿಯ ಎಷ್ಟು ಭಾಗ ಮಲಿನವಾಗಿದೆ ಎಂಬುದು ಮುಖ್ಯ ಎಂದು ಪೀಠ ಹೇಳಿತು.

ಈ ಬಗ್ಗೆ ರಾಜ್ಯ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಒಂದು ವಾರದಲ್ಲಿ ವರದಿ ಸಲ್ಲಿಸಲಾಗುವುದು ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ತಿಳಿಸಿದರು.

# ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಕೆರೆಗಳಿಗೆ ಪುನರ್ಜನ್ಮ



ದಾವಣಗೆರೆ, ಫೆ. 19- ಶ್ರೀ ವೀರೇಂದ್ರ ಹೆಗ್ಗಡೆಯವರ ಮುಂದಾಲೋಚನೆಯಿಂದ ಸಮಾಜದ ಅಭಿವೃದ್ಧಿ ಹಾಗೂ ಕೆರೆಗಳಿಗೆ ಮರುಜನ್ಮ ಕಲ್ಪಿಸುವಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯು ಕಾರ್ಯನಿರ್ವಹಿಸುತ್ತಿದೆ ಎಂದು ಸಂಸ್ಥೆಯ ನಿರ್ದೇಶಕ ಲಕ್ಷ್ಮಣ್ ಎಂ. ತಿಳಿಸಿದರು.

ತಾಲ್ಲೂಕಿನ ಯರಗುಂಟೆ ಕಾರ್ಯಕ್ಷೇತ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಹಮ್ಮಿಕೊಂಡಿದ್ದ ನಮ್ಮೂರು - ನಮ್ಮ ಕೆರೆ ಕಾರ್ಯಕ್ರಮದಡಿಯಲ್ಲಿ ಕೆರೆಯ ಹೂಳು ತೆಗೆಯುವ ಕಾರ್ಯಕ್ರಮಕ್ಕೆ ಗುದ್ದಲಿ ಪೂಜೆ ನಡೆಸಿ ಅವರು ಮಾತನಾಡುತ್ತಿದ್ದರು.

ರಾಜ್ಯಾದ್ಯಂತ ಸುಮಾರು 56 ಕೋಟಿ ರೂ. ವೆಚ್ಚದಲ್ಲಿ 873 ಕೆರೆಗಳನ್ನು ಸಂಸ್ಥೆಯ ಮುಖಾಂತರ ಅಭಿವೃದ್ಧಿ ಪಡಿಸಲಾಗಿದ್ದು, ಇದು ಹೆಗ್ಗಡೆಯವರ ಭವಿಷ್ಯದ ಚಿಂತನೆಯಿಂದಾಗಿ ನೀರನ್ನು ಸಂಗ್ರಹಿಸುವಲ್ಲಿ ಕೆರೆಗಳ ಪಾತ್ರ ಬಹು ಮುಖ್ಯವಾಗಿದೆ. ಅದಕ್ಕಾಗಿ ಸಂಸ್ಥೆಯ ವತಿಯಿಂದ ಹೂಳು ತುಂಬಿಕೊಂಡಿರುವ ಕೆರೆಗಳನ್ನು ಆಯ್ಕೆ ಮಾಡಿ ಅಂತಹ ಕೆರೆಗಳನ್ನು ಅಭಿವೃದ್ಧಿ ಪಡಿಸುವುದರ ಜೊತೆಗೆ ಸಮಾಜಮುಖಿ ಕಾರ್ಯಕ್ರಮಗಳಾದ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ, ಹಾಲಿನ ಡೈರಿ ರಚನೆಗೆ ಅನುದಾನ ವಿತರಣೆ, ವಾತ್ಸಲ್ಯ ಮನೆ ರಚನೆ, ನಿರ್ಗತಿಕರ ಮಾಸಾಶನ, ಜನಮಂಗಳ ಕಾರ್ಯಕ್ರಮದಡಿಯಲ್ಲಿ ವಿಕಲಚೇತನರ ಸಲಕರಣೆ ವಿತರಣೆ, ಜ್ಞಾನ ದೀಪ, ಶಿಕ್ಷಕರ ಒದಗಣೆ, ಸರ್ಕಾರಿ ಶಾಲಾ-ಕಾಲೇಜುಗಳಿಗೆ ಬೆಂಚು ಡೆಸ್ಕ್‌ಗಳ ವಿತರಣೆ, ಸಿಎಸ್‌ಸಿ ಕೇಂದ್ರಗಳು, ಮದ್ಯ ವರ್ಜನಾ ಶಿಬಿರ, ಕೃಷಿ ಯಂತ್ರಧಾರೆ, ಧಾರ್ಮಿಕ ಕಾರ್ಯಕ್ರಮ,ಆರೋಗ್ಯ ಅರಿವು ಕಾರ್ಯಕ್ರಮ ಮತ್ತು ಮಹಿಳೆಯರು ಸ್ವಾವಲಂಬಿ ಗಳಾಗಿ ಬದುಕು ಕಟ್ಟಿಕೊಳ್ಳುವಲ್ಲಿ ಧರ್ಮಸ್ಥಳ ಸಂಸ್ಥೆ ಮುಂದಾಗಿದೆ ಎಂದು ಹೇಳಿದರು.

ಮಹಾನಗರ ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ಮಾತನಾಡಿ, ಪುರಾತನ ಕಾಲದ ಕೆರೆಗಳನ್ನು ಉಳಿಸಿ, ಬೆಳೆಸಬೇಕಾದದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ನೀರಿನ ಸಂಗ್ರಹಣೆಯ ಹಿನ್ನಡೆಯಿಂದಾಗಿ ಬೇಸಿಗೆಯಲ್ಲಿ ಕುಡಿಯುವ ನೀರಿಗಾಗಿಯೂ ಸಹ ಸಮಸ್ಯೆಯಗುತ್ತಿದ್ದು, ನೀರಿನ ಮೂಲಗಳನ್ನು ಅಭಿವೃದ್ಧಿ ಪಡಿಸಿ ನೀರಿನ ಅಂತರ್ಜಲ ಮಟ್ಟ ಹೆಚ್ಚಿಸಬೇಕಾಗಿದೆ ಎಂದರು.

ಗೋಕಟ್ಟೆ ಕೆರೆ ಅಭಿವೃದ್ಧಿಯ ನಂತರ ಕೆರೆಗೆ ನೀರು ತುಂಬಿಸುವ ಕಾರ್ಯಕ್ಕೆ ಮಹಾನಗರ ಪಾಲಿಕೆ ಕೈ ಜೋಡಿಸುತ್ತದೆ. ಈ ಕೆರೆಯನ್ನು ಮಾದರಿ ಕೆರೆಯಾಗಿ ನಿರ್ಮಿಸುವಲ್ಲಿ ಪ್ರಯತ್ನಿಸೋಣ ಎಂದು ಮಹಾಪೌರ ಕೆ. ಚಮನ್ ಸಾಬ್ ತಿಳಿಸಿದರು.

